ಮಂಗಳೂರು ವಿಶ್ವವಿದ್ಯಾನಿಲಯ

ಕನ್ನಡದಲ್ಲಿ ಪತ್ರ ಸಾಹಿತ್ಯ

ಪಿಎಚ್.ಡಿ. ಪದವಿಗಾಗಿ ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುತ್ತಿರುವ ಸಂಶೋಧನಾ ಮಹಾಪ್ರಬಂಧದ ಮಂಡನಾ ಪೂರ್ವ ಅಂತಿಮ ಸಾರಲೇಖ

ಸಂಶೋಧಕರು

ಶಂಕರಪ್ಪ ಬಾರಿಕೇರ

ಮಾರ್ಗದರ್ಶಕರು

ಪ್ರೊ. ಸೋಮಣ್ಣ

ಪ್ರಾಧ್ಯಾಪಕರು
ಎಸ್.ವಿ.ಪಿ. ಕನ್ನಡ ಅಧ್ಯಯನ ಸಂಸ್ಥೆ
ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.

ಎಸ್.ವಿ.ಪಿ. ಕನ್ನಡ ಅಧ್ಯಯನ ಸಂಸ್ಥೆ
ಮಂಗಳೂರು ವಿಶ್ವವಿದ್ಯಾನಿಲಯ,
ಮಂಗಳಗಂಗೋತ್ರಿ – ೫೭೪೧೯೯
ಜನವರಿ–೨೦೨೧

ಕನ್ನಡದಲ್ಲಿ ಪತ್ರ ಸಾಹಿತ್ಯ

ಸಂಶೋಧನ ಅಧ್ಯಯನ ಮಹಾಪ್ರಬಂಧದ ಅಧ್ಯಾಯಗಳ

ಪರಿವಿಡಿ

ಅಧ್ಯಾಯ: **1 ಪ್ರಸ್ತಾವನೆ**

1.1 ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

1.2 ಅಧ್ಯಯನದ ವಿಧಾನ ಕ್ರಮ

1.3 ಇದುವರೆಗೆ ನಡೆದಿರುವ ಅಧ್ಯಯನದ ಸಮೀಕ್ಷೆ

1.4 ಪ್ರಸ್ತುತ ಅಧ್ಯಯನದ ಮಹತ್ವ

ಅಧ್ಯಾಯ: **2 ಪತ್ರದ ಪರಿಚಯ**

2.1. ಪತ್ರದ ಅರ್ಥ, ಸ್ವರೂಪ ಹಾಗೂ ವರ್ಗೀಕರಣ

2.2 ಪತ್ರ ಬರವಣಿಗೆಯ ತತ್ತ್ವಗಳು

2.3 ಪತ್ರ ಸಂಸ್ಕೃತಿಯ ಮಹತ್ವ

2.4 ಸಾಹಿತ್ಯ ಚರಿತ್ರೆಯಲ್ಲಿ ಪತ್ರಗಳು

ಅಧ್ಯಾಯ: **3 ಪತ್ರ ಸಾಹಿತ್ಯ**

3.1 ಪತ್ರ ಸಾಹಿತ್ಯದ ಸ್ವರೂಪ

3.2 ಪತ್ರ ಸಾಹಿತ್ಯದ ಮಹತ್ವ

3.3 ಪತ್ರ ಸಾಹಿತ್ಯದ ಚರಿತ್ರೆ

3.4 ಕನ್ನಡ ಪತ್ರ ಸಾಹಿತ್ಯದ ಪರಂಪರೆ

ಅಧ್ಯಾಯ: **4 ಕನ್ನಡ ಪತ್ರ ಸಾಹಿತ್ಯದ ವಿವೇಚನೆ**

4.1 ಸಮಗ್ರ ಪತ್ರಗಳ ಪುಸ್ತಕಗಳು

4.1.1 ಪತ್ರ ಶೈಲಿಯ ಕೃತಿಗಳು

4.1.2 ನಿಜ ಪತ್ರಗಳ ಸಂಕಲನಗಳು

4.1.3 ಭಾಷಾಂತರ, ಅನುವಾದ ಪತ್ರ ಸಂಕಲನಗಳು

4.2 ಪತ್ರಗಳು ಒಂದು ಭಾಗವಾಗಿರುವ ಕೃತಿಗಳು

4.3 ಪತ್ರಗಳಿರುವ ಅಭಿವಂದನ, ಆತ್ಮಚರಿತ್ರೆ, ಜೀವನಚರಿತ್ರೆ, ಸಂಸ್ಮರಣ ಗ್ರಂಥಗಳು

4.4 ಸಾಹಿತಿಗಳ ಅಪ್ರಕಟಿತ ಬಿಡಿ ಪತ್ರಗಳು

ಅಧ್ಯಾಯ: **5 ಆಧುನಿಕ ಕನ್ನಡ ಸಾಹಿತಿಗಳ ಪತ್ರಗಳಲ್ಲಿ ಸಾಹಿತ್ಯಕ ಅಂಶಗಳು**

5.1 ನವೋದಯ ಪೂರ್ವ ಸಾಹಿತಿಗಳ ಪತ್ರಗಳು

5.2 ನವೋದಯ ಸಾಹಿತ್ಯ ಕಾಲದ ಸಾಹಿತಿಗಳ ಪತ್ರಗಳು

5.3 ಪ್ರಗತಿಶೀಲ ಸಾಹಿತ್ಯ ಪಂಥದ ಲೇಖಕರ ಪತ್ರಗಳು

5.4 ನವ್ಯ ಸಾಹಿತ್ಯ ಕಾಲಘಟ್ಟದ ಸಾಹಿತಿಗಳ ಪತ್ರಗಳು

5.5 ದಲಿತ-ಬಂಡಾಯ ಸಾಹಿತ್ಯ ಸಂದರ್ಭದ ಸಾಹಿತಿಗಳ ಪತ್ರಗಳು

ಅಧ್ಯಾಯ: **6 ಸಮಾರೋಪ**

6.1 ಕನ್ನಡದಲ್ಲಿ ಪತ್ರ ಪುಸ್ತಕ ಹಾಗೂ ಸಾಹಿತಿಗಳ ಪತ್ರಗಳಲ್ಲಿ ಸಾಹಿತ್ಯಕ ಅಧ್ಯಯನದ ಫಲಿತಗಳು

ಅನುಬಂಧ

ಪಾರಿಭಾಷಿಕ ಪದಗಳು

ಸಾಹಿತಿಗಳ ಕೈ ಬರಹದ ಪತ್ರಗಳು

ಪ್ರಾತಿನಿಧಿಕ ಕೆಲವು ಪತ್ರ ಪುಸ್ತಕಗಳು

ಛಾಯಾ ಚಿತ್ರಗಳು

ಆಕರ ಗ್ರಂಥಗಳು

ಪರಾಮರ್ಶನ ಗ್ರಂಥಗಳು

ಲೇಖನಗಳು

ಅಧ್ಯಾಯ– ೧ ಪ್ರಸ್ತಾವನೆ

ವ್ಯಕ್ತಿಯು ತನ್ನ ಅನುಭವ, ಅನಿಸಿಕೆ, ಸುಖ–ದುಃಖ, ಕ್ಷೇಮ–ಸಮಾಚಾರವನ್ನು ತಿಳಿಸಲು ಮತ್ತು ಬಂಧುಗಳ, ಮಿತ್ರರ ಯೋಗಕ್ಷೇಮ ಕೇಳಲು ಹಾಗೂ ಸಂಸ್ಥೆಗಳೊಂದಿಗೆ ವ್ಯವಹಾರ ನಡೆಸಲು, ಅತ್ಯಂತ ಸರಳ ಸಾಧನವೇ ಪತ್ರ. ವ್ಯಕ್ತಿಯ ಬರಹದ ವಿವಿಧ ಮಾದರಿಗಳಲ್ಲಿ ಒಂದಾದ ಪತ್ರ ಲೇಖನವು, ಒಂದು ಕಾಲಘಟ್ಟದ ಜನರ ಜೀವನದಲ್ಲಿ ಸಂಪರ್ಕ ಸಾಧನವಾಗಿ ಪ್ರಮುಖ ಪಾತ್ರವಹಿಸಿದೆ. ಇಂತಹ ಹಿನ್ನೆಲೆಯಿರುವ ಪತ್ರ ರೂಪದಲ್ಲಿ ರಚಿಸಲ್ಪಟ್ಟಿರುವ ಸಾಹಿತ್ಯಕ್ಕೆ ಸಾಹಿತ್ಯ ಚರಿತ್ರೆಯಲ್ಲಿ ದೀರ್ಘ ಇತಿಹಾಸವಿದೆ. ಕ್ರಿ. ಶ. ಪೂರ್ವ ಒಂದನೆಯ ಶತಮಾನದಲ್ಲಿ ಹೊರಸ್ ರಚಿಸಿದ (ಇಂದು Arts Poetica ಪ್ರಸಿದ್ಧವಾಗಿರುವ) ವಿಮರ್ಶನ ಕೃತಿಯ ಹೆಸರು Epistola ad Pisones ('ಪಿಸೊ ಪುತ್ರನಿಗೆ ಬರೆದ ಪತ್ರ'); ಇದು ಪತ್ರ ರೂಪದಲ್ಲಿ ವ್ಯಕ್ತಿಯೊಬ್ಬನನ್ನು ಉದ್ದೇಶಿಸಿ ಬರೆಯಲ್ಪಟ್ಟ ಕೃತಿ. ಆಧುನಿಕ ಕಾಲಕ್ಕೆ ಬಂದರೆ ಈ 'ಪತ್ರ–ನಿರೂಪಣೆ' ಎಂಬ ಸಾಹಿತ್ಯಕ ತಂತ್ರ (Epistolary Mode) 17–18 ನೆಯ ಶತಮಾನಗಳಲ್ಲಿ ಇಂಗ್ಲೆಂಡ್‌ನಲ್ಲಿ ತುಂಬ ಜನಪ್ರಿಯವಾಗಿತ್ತು. ಅಂದಿನ ಪ್ರಸಿದ್ಧ ಕಾದಂಬರಿಗಳಾದ ರಿಚರ್ಡ್ಸನ್‌ನ ಪಾಮೆಲಾ ಮತ್ತು ಕ್ಲರಿಸ್ಸಾ ಹಾರ್ಲೋ ಸಂಪೂರ್ಣವಾಗಿ ಪತ್ರಗಳ ರೂಪದಲ್ಲಿಯೇ ಇವೆ (ಕ್ಲರಿಸ್ಸಾ ಸುಮಾರು 600–700 ಪುಟಗಳಿರುವ ಬೃಹತ್ ಕಾದಂಬರಿ). ಹೀಗೆ ಮುಂದುವರೆದ ಪತ್ರ ಸಾಹಿತ್ಯ ಪ್ರಸ್ತುತ ಹಲವು ಮುಖಗಳಲ್ಲಿ ಅಂದರೆ ಪತ್ರ ಶೈಲಿ, ನಿಜ ಪತ್ರ, ಅನುವಾದ, ಪತ್ರಗಳು ಒಂದು ಭಾಗವಾಗಿರುವ ಕೃತಿಗಳು, ಅಭಿವಂದನ, ಆತ್ಮಕತೆ, ಜೀವನ ಚರಿತ್ರೆ, ಸಂಸ್ಮರಣ ಮುಂತಾದ ಸಾಹಿತ್ಯದ ಇತರ ಪ್ರಕಾರದ ಗ್ರಂಥಗಳಲ್ಲಿ ಪತ್ರಗಳು ಪ್ರಕಟವಾಗತೊಡಗಿವೆ. ಪತ್ರಗಳು ಸಾಹಿತ್ಯದ ಪ್ರಕಾರವಾಗಿ, ಕಲಾತ್ಮಕ ಅಭಿವ್ಯಕ್ತಿಯಾಗಿ ಕಂಡುಬರುವುದು ಇತ್ತೀಚಿಗೆ ಮಾತ್ರ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವ ವಿಷಯ 'ಕನ್ನಡದಲ್ಲಿ ಪತ್ರ ಸಾಹಿತ್ಯ'. ಸಂಶೋಧನಾಧ್ಯಯನ ಕೈಗೊಳ್ಳಲು ಈ ಅಧ್ಯಯನ ವಿಷಯ ತುಂಬ ಆಸಕ್ತಿದಾಯಕ ಜತೆಗೆ ಕುತೂಹಲಕರವೆನಿಸಿದೆ.

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

'ಕನ್ನಡದಲ್ಲಿ ಪತ್ರ ಸಾಹಿತ್ಯ' ಸಂಶೋಧನಾ ವಿಷಯಕ್ಕೆ ಸಂಬಂಧಿಸಿದಂತೆ ಸಂಶೋಧನೆ ನಡೆದಿರುವುದು ಇಲ್ಲವೇ ಇಲ್ಲವೆನ್ನಬಹುದು. ಪ್ರಸ್ತುತ ಅಧ್ಯಾಯದಲ್ಲಿ ಸಂಶೋಧನ ಅಧ್ಯಯನದ ಉದ್ದೇಶ, ವ್ಯಾಪ್ತಿ ಹಾಗೂ ವಿಧಾನಗಳನ್ನು ಸ್ಪಷ್ಟಪಡಿಸಿಕೊಂಡು; ಆ ಹಿನ್ನೆಲೆಯಲ್ಲಿ ಸಂಶೋಧನಾಧ್ಯಯನ ನಡೆಸಿ, ಈ ಅಧ್ಯಯನದ ಫಲಿತ ಕಂಡುಕೊಳ್ಳಲಾಗಿದೆ. ಇದನ್ನು ಮಹಾಪ್ರಬಂಧದ ಕೊನೆಯಲ್ಲಿ ನಿರ್ವಚಿಸಲಾಗಿದೆ. ಈ ಸಂಶೋಧನಾ ಪ್ರಬಂಧದಲ್ಲಿ ಪತ್ರ ಮತ್ತು ಪತ್ರ ಸಾಹಿತ್ಯದ ಅರ್ಥ, ಪತ್ರ ಸಂಸ್ಕೃತಿಯ ಮಹತ್ವ ಹಾಗೂ ಸಾಹಿತ್ಯ ಚರಿತ್ರೆಯಲ್ಲಿ ಪತ್ರಗಳು ಎನ್ನುವ ಉಪ ಅಧ್ಯಾಯಗಳ ಪರಿಕಲ್ಪನೆಯಲ್ಲಿ ವಿವೇಚಿಸಲಾಗಿದೆ. ಪತ್ರ

ಪದದ ರೂಪ ನಿಷ್ಪತ್ತಿಯನ್ನು ನಿಘಂಟು, ಶಬ್ದಾರ್ಥಕೋಶ ಹಾಗೂ ಭಾಷಾಶಾಸ್ತ್ರ ಗ್ರಂಥಗಳ ಆಧಾರದ ಮೇಲೆ ನಿರ್ವಚಿಸಲಾಗಿದೆ. ಕನ್ನಡದಲ್ಲಿ ಪತ್ರ ಸಾಹಿತ್ಯದ ಪ್ರಯೋಗ, ಪ್ರಯತ್ನ ಮತ್ತು ನಡೆದು ಬಂದ ದಾರಿಯನ್ನು ವಿವೇಚಿಸುವಲ್ಲಿ ಈ ಅಧ್ಯಯನ ಸಫಲವಾಗಿದೆ. ಕನ್ನಡದಲ್ಲಿ ಪತ್ರ ಸಾಹಿತ್ಯ ಎನ್ನುವುದು ಸಾಹಿತ್ಯದ ವಿವಿಧ ಅಂಶ ಹಾಗೂ ಪ್ರಕಾರಗಳಲ್ಲಿ ವ್ಯಕ್ತಗೊಂಡಿದೆ. ಸಮಗ್ರ ಪತ್ರ ಪುಸ್ತಕಗಳು(ಪತ್ರ ಶೈಲಿ ಮತ್ತು ನಿಜ ಪತ್ರಗಳ ಪುಸ್ತಕಗಳು ಹಾಗೂ ಭಾಷಾಂತರ, ಅನುವಾದ ಪತ್ರ ಪುಸ್ತಕಗಳು) ಕೃತಿಯ ಒಂದು ಭಾಗವಾಗಿರುವ ಪತ್ರಗಳು, ಅಭಿವಂದನ, ಆತ್ಮಕತೆ, ಜೀವನ ಚರಿತ್ರೆ, ಸಂಸ್ಮರಣ ಗ್ರಂಥಗಳಲ್ಲಿ ಸಾಂದರ್ಭಿಕವಾಗಿ ಪ್ರಕಟವಾಗಿರುವ ಪತ್ರಗಳು ಹಾಗೂ ಸಾಹಿತಿಗಳ ಅಪ್ರಕಟಿತ ಬಿಡಿ ಪತ್ರಗಳು (ಸಾಹಿತಿಗಳು ಕ್ಷೇತ್ರ ಅಧ್ಯಯನದಲ್ಲಿ ನೀಡಿರುವುದು) ಹೀಗೆ ಪತ್ರ ಪುಸ್ತಕಗಳನ್ನು ಸಾಹಿತ್ಯದ ಪ್ರಕಾರಾಂಶ, ವಿಷಯಾಂಶಗಳ ಆಧಾರದ ಮೇಲೆ ವರ್ಗೀಕರಣ ಮಾಡಿ ವಿವೇಚಿಸುವ ಅಧ್ಯಯನದ ಪ್ರಧಾನ ಉದ್ದೇಶ ಇಲ್ಲಿ ಸಾಧಿತವಾಗಿದೆ. ಅಷ್ಟೆ ಅಲ್ಲದೇ ಹೊಸಗನ್ನಡ ಸಾಹಿತಿಗಳ ಪತ್ರಗಳನ್ನು ಕಾಲಘಟ್ಟಾನುಸಾರ ಸಾಹಿತ್ಯಕ ವಿಷಯಾಂಶಗಳ ಆಧಾರದ ಮೇಲೆ ವರ್ಗೀಕರಣ ಮಾಡಿ ವಿವೇಚಿಸುವ ಅಂದರೆ- ಆಧುನಿಕ ಕಾಲದ ಹೊಸಗನ್ನಡ ಸಾಹಿತ್ಯದ ವಿವಿಧ ಘಟ್ಟಗಳಾದ ನವೋದಯ ಪೂರ್ವ, ನವೋದಯ, ಪ್ರಗತಿಶೀಲ, ನವ್ಯ ಮತ್ತು ದಲಿತ ಬಂಡಾಯ ಸಾಹಿತ್ಯದ ಪರಂಪರೆಯಲ್ಲಿ ಗುರುತಿಸಿಕೊಂಡ ಕವಿಗಳ, ಲೇಖಕರ ಪ್ರಕಟವಾದ ಪತ್ರ ಪುಸ್ತಕದ ಪತ್ರಗಳಲ್ಲಿ ಸಾಹಿತ್ಯಕ ಅಂಶಗಳನ್ನು ಗುರುತಿಸಿ ವಿವೇಚಿಸುವ ಪ್ರಧಾನ ಉದ್ದೇಶವನ್ನು ಈ ಸಂಶೋಧನ ಮಹಾಪ್ರಬಂಧದಲ್ಲಿ ಸಾಧಿಸಲಾಗಿದೆ.

ಈ ಮಹಾಪ್ರಬಂಧದ ಅಧ್ಯಯನ ವ್ಯಾಪ್ತಿಯು ೧೯೪೧ರಲ್ಲಿ ಪ್ರಕಟಿತವಾದ ಕಪಟರಾಳ ಕೃಷ್ಣರಾಯರ ಅವರ 'ಮಗಳಿಗೆ ತಂದೆಯ ಓಲೆಗಳು' ಎನ್ನುವ ಅನುವಾದಿತ ಪತ್ರ ಪುಸ್ತಕವು ಕನ್ನಡದಲ್ಲಿ ಪ್ರಥಮ ಪ್ರಯತ್ನವಾಗಿದೆ. ಇದರ ಮೊದಲು ಹರ್ಮನ್ ಮೊಗ್ಲಿಂಗ್‌ನು ೧೮೪೧ರಲ್ಲಿ 'ಈದಾರು ಪತ್ರಗಳು' ಹೆಸರಿನಲ್ಲಿ ೧೨ ಪತ್ರಗಳಿರುವ ಸಂಕಲನ ಪ್ರಕಟಪಡಿಸಿದನು. ಕನ್ನಡ ಪತ್ರ ಸಾಹಿತ್ಯದ ಮೊದಲ ದಾಖಲೆಯಾಗಿದೆ. ಆದರೆ ಅಧ್ಯಯನಕ್ಕೆ ಈ ಪುಸ್ತಕ ಸಿಗಲಿಲ್ಲ. ಕನ್ನಡಿಗರಿಂದಲೇ ಸ್ವತಂತ್ರ ಮೊದಲ ಪತ್ರ ಪುಸ್ತಕವಾಗಿ ೧೯೪೫ರಲ್ಲಿ ಸಿ. ಕೃಷ್ಣ ಅವರ 'ಮುಗುದೆಯ ಪತ್ರಗಳು' ಪ್ರಕಟವಾಯಿತು. ನಂತರದಲ್ಲಿ ಜಿ. ಪಿ. ರಾಜರತ್ನಂ ಅವರು ೧೯೪೮ರಲ್ಲಿ ಸಂಪಾದಿಸಿದ 'ಕೈಲಾಸಂ ನೆನಪು' ಕೃತಿಯು ಪತ್ರಗಳು ಒಂದು ಭಾಗವಾಗಿರುವ ಪುಸ್ತಕದಲ್ಲಿ ಮೊದಲನೆಯದಾಗಿದೆ. ಈ ಕೃತಿಯಲ್ಲಿ 'ಕೈಲಾಸಂ ಕಾಗದಗಳು' ಎನ್ನುವ ಶೀರ್ಷಿಕೆ ಭಾಗದಲ್ಲಿ ಕೈಲಾಸಂ ಅವರ ೧೫ ಕಾಗದಗಳು ಪ್ರಕಟಗೊಂಡಿವೆ. ಈ ಕೃತಿಯಿಂದ ಆರಂಭಗೊಂಡು ಪ್ರಸ್ತುತ ಸಾಹಿತಿಗಳ ಮತ್ತು ಇತರರ ಪತ್ರ ಪುಸ್ತಕಗಳು(ಸಾಹಿತ್ಯದ ಹಿನ್ನೆಲೆಯಿಂದ ಬಂದ ಪ್ರಕಟವಾದ ಕೃತಿಗಳು) ಹಾಗೂ ಸಾಹಿತಿಗಳಿಂದ ಸಂಗ್ರಹಿಸಿದ ಅಪ್ರಕಟಿತ ಪತ್ರಗಳನ್ನು ನನ್ನ ಅಧ್ಯಯನ ವ್ಯಾಪ್ತಿಯಲ್ಲಿ ವಿವೇಚಿಸಲಾಗಿದೆ.

ಅಧ್ಯಯನದ ವಿಧಾನ ಕ್ರಮ

ಕನ್ನಡದಲ್ಲಿ ಪತ್ರ ಸಾಹಿತ್ಯ ಎಂಬ ವಿಷಯದ ಕುರಿತು ಸಂಶೋಧನಾಧ್ಯಯನವನ್ನು ಪ್ರಧಾನವಾಗಿ ಆಕರ ಸಾಮಗ್ರಿಗಳಾದ ಪ್ರಕಟವಾದ ಪತ್ರ ಪುಸ್ತಕಗಳು, ಇತರ ಗ್ರಂಥಗಳು ಹಾಗೂ ಸಾಹಿತಿಗಳು ನನ್ನ ಸಂಶೋಧನಾಧ್ಯಯನಕ್ಕೆ ನೀಡಿರುವ ಅಪ್ರಕಟಿತ ಬಿಡಿ ಪತ್ರಗಳನ್ನು ಅವಲೋಕನ ವಿಧಾನವನ್ನು ಅಳವಡಿಸಿಕೊಂಡು ಅಧ್ಯಯನ ಕೈಗೊಳ್ಳಲಾಯಿತು. ನನ್ನ ಪತ್ರಕ್ಕೆ ಸ್ಪಂದಿಸಿದ ಸಾಹಿತಿಗಳನ್ನು ಭೇಟಿ ಮಾಡಿದ ಸಂದರ್ಭದಲ್ಲಿ ದೂರವಾಣಿ, ಮೊಬೈಲ್ ಇಲ್ಲದ ಕಾಲಘಟ್ಟದಲ್ಲಿ ಪತ್ರಗಳ ಮಹತ್ವದ ಬಗೆಗೆ ಸಂದರ್ಶನ ವಿಧಾನದ ಮೂಲಕ ಚರ್ಚಿಸಿದೆನು. ಜತೆಗೆ ಸಹಭಾಗಿತ್ವ ಅವಲೋಕನದ ಮೂಲಕ ಸಾಹಿತಿಗಳೊಂದಿಗೆ, ಸಾಹಿತಿಗಳ ಅತಿ ಖಾಸಗಿಯಲ್ಲದ ಅಧ್ಯಯನಕ್ಕೆ ಮುಖ್ಯವೆನಿಸಿದ ಪತ್ರಗಳನ್ನು ಪರಿಶೀಲಿಸಿ ಸಂಗ್ರಹಿಸಿ, ನಿರ್ವಚಿಸಲಾಗಿದೆ.

ಸಂಶೋಧನಾಧ್ಯಯನದ ಮೊದಲಿಗೆ ಪತ್ರದ ಅರ್ಥ, ಸ್ವರೂಪ, ಪ್ರಕಾರ, ಪತ್ರದ ಸಂಸ್ಕೃತಿಯ ಮಹತ್ವ ಹಾಗೂ ಸಾಹಿತ್ಯ ಚರಿತ್ರೆಯ ಪತ್ರಗಳು. ಪತ್ರ ಸಾಹಿತ್ಯದ ಸ್ವರೂಪ, ಮಹತ್ತು, ಚರಿತ್ರೆ ಹಾಗೂ ಕನ್ನಡ ಪತ್ರ ಸಾಹಿತ್ಯದ ಪರಂಪರೆ(ಬೆಳೆದು ಬಂದ ಕ್ರಮ) ಈ ಎರಡು ಅಧ್ಯಾಯಗಳಿಗೆ ಸಂಬಂಧಿಸಿದಂತೆ ಕನ್ನಡ, ಆಂಗ್ಲ ಭಾಷೆಯ ಶಬ್ದಕೋಶ, ಕನ್ನಡ ಪತ್ರ ಪುಸ್ತಕಗಳು, ಅಂತರ್‌ಜಾಲ ಹಾಗೂ ಮಾಹಿತಿ ಪೂರಕ ಸಂಬಂಧಪಟ್ಟ ಗ್ರಂಥಗಳನ್ನು ಶೋಧಿಸಿ ಪರಾಮರ್ಶಿಸಲಾಯಿತು.

ಕನ್ನಡ ಪತ್ರ ಸಾಹಿತ್ಯದ ಪತ್ರ ಸಾಹಿತ್ಯ ಎನ್ನುವ ಪ್ರಧಾನ ಅಧ್ಯಾಯವು ಮಹಾಪ್ರಬಂಧದ ಶೀರ್ಷಿಕೆಯ ಹೆಸರನ್ನು ಹೊಂದಿದ್ದು, ಅತ್ಯಂತ ದೊಡ್ಡ ಅಧ್ಯಾಯವಾಗಿದೆ. ಕನ್ನಡದಲ್ಲಿ ಪ್ರಕಟವಾದ ಪತ್ರಗಳ ಪುಸ್ತಕಗಳನ್ನು ಹಾಗೂ ಸಾಹಿತಿಗಳು ವ್ಯವಹರಿಸಿದ ಪತ್ರಗಳ ನೆರಳಚ್ಚು(ಝರಾಕ್ಸ ಪ್ರತಿ) ಆದ ಅಪ್ರಕಟಿತ ಪತ್ರಗಳನ್ನು ಪರಾಮರ್ಶಿಸುವುದಕ್ಕೆ ಹಿನ್ನೆಲೆಯಲ್ಲಿ ಪತ್ರಗಳು ಸಮಗ್ರವಾಗಿ ಕೃತಿರೂಪದಲ್ಲಿ(ಪತ್ರ ಶೈಲಿಯ ಪುಸ್ತಕಗಳು, ವ್ಯವಹರಿಸಿದ(ನಿಜ) ಪತ್ರಗಳ ಪುಸ್ತಕಗಳು, ಅನುವಾದ ಪತ್ರ ಪುಸ್ತಕಗಳು), ಪತ್ರಗಳು ಒಂದು ಭಾಗವಾಗಿರುವ ಕೃತಿಗಳು. ಅಭಿವಂದನ, ಆತ್ಮಚರಿತ್ರೆ, ಜೀವನ ಚರಿತ್ರೆ ಸಂಸ್ಮರಣ ಹಾಗೂ ಇತರ ಕೃತಿಗಳಲ್ಲಿ ಸಾಂದರ್ಭಿಕವಾಗಿ ಪ್ರಕಟವಾದ ಪತ್ರಗಳು ಹಾಗೂ ಸಾಹಿತಿಗಳ ಅಪ್ರಕಟಿತ ಬಿಡಿಪತ್ರಗಳು. ಹೀಗೆ ಪತ್ರ ಪುಸ್ತಕಗಳನ್ನು ವರ್ಗೀಕರಿಸಿ, ಆ ಹಿನ್ನೆಲೆಯಲ್ಲಿ ಉಪ ಅಧ್ಯಾಯಗಳನ್ನಾಗಿ ಮಾಡಿ ವಿವೇಚಿಸುವ ವಿಧಾನ ಕ್ರಮವನ್ನು ಈ ಸಂಶೋಧನ ಅಧ್ಯಯನದ ಮಹಾಪ್ರಬಂಧದಲ್ಲಿ ಅನುಸರಿಸಲಾಗಿದೆ.

ಆಧುನಿಕ ಕನ್ನಡ ಸಾಹಿತಿಗಳ ಪತ್ರಗಳಲ್ಲಿ ಸಾಹಿತ್ಯಕ ಅಂಶಗಳು ಎನ್ನುವ ಮುಖ್ಯ ಅಧ್ಯಾಯದಲ್ಲಿ ಕನ್ನಡ ಪತ್ರ ಪುಸ್ತಕಗಳಲ್ಲಿನ ಪತ್ರಗಳ ಆಧಾರದ ಮೇಲೆ ನವೋದಯ ಪೂರ್ವ, ನವೋದಯ, ಪ್ರಗತಿಶೀಲ, ನವ್ಯ ಮತ್ತು ದಲಿತ–ಬಂಡಾಯ ಸಾಹಿತ್ಯ ಕಾಲದ ಪರಂಪರೆಯಲ್ಲಿ ಗುರುತಿಸಿಕೊಂಡ ಕವಿಗಳ, ಲೇಖಕರ ಪತ್ರಗಳಲ್ಲಿ ಸಾಹಿತ್ಯಕ ಅಂಶಗಳ ಕುರಿತಂತೆ ಸಂಕ್ಷಿಪ್ತ ವಿವರಗಳನ್ನು ಇಲ್ಲಿ

ಪ್ರಸ್ತಾವಿಸಲಾಗಿದೆ. ಸಾಹಿತಿಗಳ ಅಪ್ರಕಟಿತ ಪತ್ರಗಳು, ಪತ್ರ ಪುಸ್ತಕ, ಅಭಿನಂದನ, ಆತ್ಮಕತೆ, ಜೀವನ ಚರಿತ್ರೆ, ಸಂಸ್ಮರಣ ಗ್ರಂಥಗಳು ಹಾಗೂ ಇತರ ಕೃತಿಗಳ ಮೂಲಕ ಸಂಗ್ರಹಿಸಿದ ಪತ್ರಗಳ ಮಾಹಿತಿಯನ್ನು ಆಧರಿಸಿ ಸಂಶೋಧನಾ ಅಧ್ಯಯನದ ವಿಷಯಕ್ಕೆ ಸಂಬಂಧಪಟ್ಟಂತೆ ಅಧ್ಯಾಯ, ಉಪ ಅಧ್ಯಾಯವಾರು ಆಕರಗಳನ್ನು ವಿಂಗಡಿಸಿ ಮಹಾಪ್ರಬಂಧದಲ್ಲಿ ಸಮಗ್ರ ವಿಶ್ಲೇಷಣೆಯನ್ನು ನಡೆಸಲಾಗಿದೆ.

ಪತ್ರ ವ್ಯವಹಾರ ನಡೆಸಿ ಪತ್ರಗಳನ್ನು ಜತನ(ಜೋಪಾನ)ವಾಗಿ ಕಾಯ್ದುಕೊಂಡಿರುವ ಸಾಹಿತಿಗಳು ಅವರು ಇರುವಲ್ಲಿಗೆ ಹೋಗಿ ಕ್ಷೇತ್ರ ಕಾರ್ಯದ ಮೂಲಕ ಮಾಹಿತಿ ಸಂಗ್ರಹಿಸಲಾಗಿದೆ. ಮಹಾಪ್ರಬಂಧದ ಅನುಬಂಧದಲ್ಲಿ ಭಾವಚಿತ್ರಗಳನ್ನು ಜೋಡಿಸಿದೆ. ಪತ್ರಗಳಿಗೆ ಸಂಬಂಧಿಸಿದಂತೆ ಮಾಹಿತಿ ಅದು ಮೌಖಿಕವಾಗಿ ಅಂದರೆ ಒಂದು ಕಾಲಘಟ್ಟದಲ್ಲಿ ಪ್ರಮುಖ ಸಂಪರ್ಕ ಮಾಧ್ಯಮವಾದ ಪತ್ರಗಳು ಅವು ನಿರ್ವಹಿಸಿದ ಪಾತ್ರವನ್ನು ಕುರಿತು ಸಾಹಿತಿಗಳಲ್ಲಿ ಮನದುಂಬಿ ಬಂದ ಸೊಗಸಾದ ಮಾತುಗಳನ್ನು ಕೂಡ ಮಾಹಿತಿಯ ಆಕರ ಸಾಮಾಗ್ರಿಗಳಾಗಿ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ. ಪತ್ರಗಳು ಪುಸ್ತಕ ರೂಪದಲ್ಲಿ ಪ್ರಕಟವಾಗಿರುವ ಸಂಪಾದಿತ ಕೃತಿಗಳನ್ನು ಮುಖ್ಯ ಆಕರ ಸಾಮಗ್ರಿಗಳನ್ನಾಗಿ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

ಆಧುನಿಕ ಕನ್ನಡ ಸಾಹಿತಿಗಳ ಪತ್ರಗಳಲ್ಲಿ ಸಾಹಿತ್ಯಕ ವಿಷಯಾಂಶಗಳಿಗೆ ಸಂಬಂಧಿಸಿದಂತೆ ಸಮಗ್ರ ಮಾಹಿತಿ ಶರೀರವನ್ನು ಆಧರಿಸಿ ಚಾರಿತ್ರಿಕ ವಿಧಾನದ ಮೂಲಕ ಪತ್ರ ಪುಸ್ತಕ, ಪತ್ರಗಳನ್ನು ವರ್ಗೀಕರಿಸಿ ಹೊಸಗನ್ನಡ ಸಾಹಿತ್ಯದ ಪ್ರತಿಯೊಂದು ಘಟ್ಟದ ಸಾಹಿತಿಗಳ ಪತ್ರಗಳನ್ನು ಅವು ಒಳಗೊಂಡಿರುವ ವಿಷಯ ಅಂಶಗಳ ಹಿನ್ನೆಲೆಯಲ್ಲಿ ಪತ್ರಗಳನ್ನು ಹೋಲಿಕೆ, ಜೋಡಣೆ ಮತ್ತು ವಿಭಾಗ ಮಾಡಿ ಸಮೀಕ್ಷಾತ್ಮಕ ವಿಧಾನ ಹಾಗೂ ವಿಶ್ಲೇಷಣಾ ವಿಧಾನದಿಂದ ವಿವೇಚಿಸಲಾಗಿದೆ. ಈ ಅಧ್ಯಯನದ ವಿಧಾನದಲ್ಲಿ ಪತ್ರಗಳನ್ನು ಕವಿಗಳ–ಲೇಖಕರ ನೆಲೆಯಲ್ಲಿ ನೋಡಿದಾಗ ವಿವಿಧ ವಿಷಯಾಂಶಗಳಲ್ಲಿ (ಸಾಹಿತಿಯ ಮನೋಭಾವ ಹಾಗೂ ಸಂಗತಿ) ಪ್ರತಿ ಸಾಹಿತಿಯ ಪತ್ರಗಳು ಹೇಗೆ ಭಿನ್ನವಾಗಿವೆ, ಅನನ್ಯವಾಗಿವೆ ಎಂಬುದನ್ನು ಈ ಸಂಶೋಧನ ಮಹಾಪ್ರಬಂಧದಲ್ಲಿ ವಿವೇಚಿಸಲಾಗಿದೆ.

ಅಧ್ಯಯನದ ಸಮೀಕ್ಷೆ

ಕನ್ನಡ ಸಾಹಿತ್ಯದಲ್ಲಿ ಪತ್ರ ಪುಸ್ತಕ ಪ್ರಕಾರ ಕನ್ನಡದಲ್ಲಿ ಮೊದಲ ಪ್ರಯೋಗ ನಡೆದದು ೧೯೪೧ ರಲ್ಲಿ ಪ್ರಕಟಿತವಾದ ಕಪಟರಾಳ ಕೃಷ್ಣರಾಯರ 'ಮಗಳಿಗೆ ತಂದೆಯ ಓಲೆಗಳು' ಎನ್ನುವ ಅನುವಾದಿತ ಪತ್ರ ಪುಸ್ತಕವು ಕನ್ನಡದಲ್ಲಿ ಪ್ರಥಮ ಪ್ರಯತ್ನವಾಗಿದೆ. ಇದರ ಮೊದಲು ಹರ್ಮನ್ ಮೊಗ್ಲಿಂಗ್‌ನು ೧೮೪೧ ರಲ್ಲಿ 'ಈದಾರು ಪತ್ರಗಳು' ಹೆಸರಿನಲ್ಲಿ ೧೨ ಪತ್ರಗಳಿರುವ ಸಂಕಲನ ಪ್ರಕಟಪಡಿಸಿದನು. ಕನ್ನಡ ಪತ್ರ ಸಾಹಿತ್ಯದ ಮೊದಲ ದಾಖಲೆಯಾಗಿದೆ. ಆದರೆ ಅಧ್ಯಯನಕ್ಕೆ ಈ ಪುಸ್ತಕ ಸಿಗಲಿಲ್ಲ. ಕನ್ನಡಿಗರಿಂದಲೇ

ಸ್ವತಂತ್ರ ಮೊದಲ ಪತ್ರ ಪುಸ್ತಕವಾಗಿ ೧೯೪೫ರಲ್ಲಿ ಸಿ. ಕೃಷ್ಣ ಅವರ 'ಮುಗುದೆಯ ಪತ್ರಗಳು' ಪ್ರಕಟವಾಯಿತು. ನಂತರದಲ್ಲಿ ಜಿ. ಪಿ. ರಾಜರತ್ನಂ ಅವರು ೧೯೪೮ರಲ್ಲಿ ಸಂಪಾದಿಸಿದ 'ಕೈಲಾಸಂ ನೆನಪು' ಕೃತಿಯು ಪತ್ರಗಳು ಒಂದು ಭಾಗವಾಗಿರುವ ಪುಸ್ತಕದಲ್ಲಿ ಮೊದಲನೆಯದಾಗಿದೆ. ಈ ಕೃತಿಯಲ್ಲಿ 'ಕೈಲಾಸಂ ಕಾಗದಗಳು' ಎನ್ನುವ ಶೀರ್ಷಿಕೆಯ ಭಾಗದಲ್ಲಿ ಕೈಲಾಸಂ ಅವರ ೧೫ ಕಾಗದಗಳು ಪ್ರಕಟಗೊಂಡಿವೆ. ಈ ಕೃತಿಯಿಂದ ಆರಂಭಗೊಂಡು ವಲಿ ಆರ್. ಹಿರಿಯೂರರ 'ಅಮೃತ ಪತ್ರಗಳು' (೨೦೧೮) ಪ್ರಸ್ತುತ ಸಾಹಿತಿಗಳ ಮತ್ತು ಇತರರ ಪತ್ರ ಪುಸ್ತಕಗಳು ಹಾಗೂ ಸಾಹಿತಿಗಳಿಂದ ಸಂಗ್ರಹಿಸಿದ ಅಪ್ರಕಟಿತ ಪತ್ರಗಳನ್ನು ಅಧ್ಯಯನದಲ್ಲಿ ವಿವೇಚಿಸಲಾಗಿದೆ. ಪತ್ರ ಸಂಸ್ಕೃತಿ ಮತ್ತು ಪತ್ರ ಸಾಹಿತ್ಯ ಸಂಬಂಧಿಯಾಗಿ ಬಂದಿರುವ ವಿಮರ್ಶೆ, ಪ್ರಬಂಧ ಪುಸ್ತಕಗಳು, ಪತ್ರಿಕಾ ಲೇಖನಗಳು ಹಾಗೂ ಅಂತರ್ಜಾಲದ ಮಾಹಿತಿಗಳನ್ನು ಸಂದರ್ಭಾನುಸಾರ ಬಳಸಿಕೊಳ್ಳಲಾಗಿದೆ.

ಪತ್ರ ಸಂಸ್ಕೃತಿ, ಸಾಹಿತಿಗಳ ಪತ್ರಗಳು, ಪತ್ರ ಪುಸ್ತಕಗಳ ಬಗೆಗೆ ಪರಾಮರ್ಶಿಸುವುದಕ್ಕೆ ಅನುಕೂಲವಾದ ಕೃತಿಗಳನ್ನು ಪೂರಕ ಆಕರವಾಗಿ ಬಳಸಿಕೊಂಡು; ಕನ್ನಡ ಪತ್ರ ಪುಸ್ತಕಗಳು, ಸಾಹಿತಿಗಳ ಪ್ರಕಟಿತ ಮತ್ತು ಅಪ್ರಕಟಿತ ಪತ್ರಗಳನ್ನು ಮುಖ್ಯ ಆಕರಗಳಾಗಿ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

ಅಧ್ಯಯನದ ಮಹತ್ವ

೨೧ನೆಯ ಶತಮಾನದ ಮುಂಚೆ ಭೂಮಿಯ ಮೇಲಿನ ಮನುಷ್ಯನ ಬದುಕು ಕೆಲವು ಮುಖ್ಯ ವಿಷಯಗಳೊಂದಿಗೆ ತಳಕು ಹಾಕಿಕೊಂಡಿದೆ. ಅವುಗಳಲ್ಲಿ ಒಂದು ಕಾಲಘಟ್ಟದಲ್ಲಿ ಪ್ರಧಾನ ಸಂಪರ್ಕ ಮಾಧ್ಯಮವಾಗಿದ್ದ ಪತ್ರ ಕೂಡ ಒಂದು. ಈಗ ಪತ್ರ ವ್ಯವಹಾರ ಬಹುಪಾಲು ಕಡಿಮೆಯಾಗಿದೆ. ಇದಕ್ಕೆ ಕಾರಣ ಆಧುನಿಕ ಮನುಷ್ಯನ ಬಾಳಿನಲ್ಲಿ ವಿಜ್ಞಾನದ ಶೋಧದ ಫಲಗಳಾದ ದೂರವಾಣಿ, ಮೊಬೈಲ್, ಗಣಕಯಂತ್ರ, ಅಂತರಜಾಲದ ಮೂಲಕ ಇ-ಮೇಲ್, ಫೇಸ್‌ಬುಕ್, ವಾಟ್ಸಾಪ್, ಟ್ವಿಟರ್‌ಗಳು ನಿತ್ಯ ಜೀವನದಲ್ಲಿ ಹಾಸು ಹೊಕ್ಕಿವೆ. ಇವು ಬರುವ ಮುಂಚೆ ಪತ್ರಗಳೇ ಸುದ್ದಿ ತಲುಪಿಸುವ ವಾಹಕಗಳಾಗಿದ್ದವು. ಪತ್ರಗಳು ಪ್ರಕಟವಾಗುವುದಿಲ್ಲ, ಪುಸ್ತಕಗಳಾಗುವುದಿಲ್ಲ ಎಂಬ ಧೋರಣೆಯೇ ಪತ್ರ ಸಾಹಿತ್ಯದ ಪತ್ರಗಳ ಪಾಲಿನ ಗುಣವೂ ಹೌದು. ಯಾಕೆಂದರೆ ಪತ್ರ ಬರಹ ಮುಕ್ತತೆಯಿಂದ ಕೂಡಿ ಸಹಜವಾಗಿ ವ್ಯವಹರಿಸಲ್ಪಟ್ಟಿರುತ್ತವೆ. ಭಾವನೆಗಳನ್ನು ಮುಕ್ತವಾಗಿ ಹಾಗೂ ವಿಷಯಗಳನ್ನು ಲೋಕಾಭಿರಾಮವಾಗಿ ಹಂಚಿಕೊಳ್ಳಲು ಅವಕಾಶವಿರುತ್ತದೆ. ಇಂಥ ಪತ್ರಗಳು ಅವು ಹೊಂದಿರುವ ಸತ್ಯಾಂಶಗಳಿಂದ ಒಂದು ಕಾಲಘಟ್ಟದ ಪ್ರದೇಶದಲ್ಲಿನ ಜನ ಸಮುದಾಯದ ಮನಸ್ಥಿತಿಯ ಖಚಿತವಾದ ದಾಖಲೆಗಳಾಗಿವೆ. ಸಾಹಿತಿಗಳ ಪತ್ರ ಪುಸ್ತಕಗಳು ಪ್ರಕಟವಾದ ಕಾಲದಲ್ಲಿ (೧೯೪೧, ೧೯೪೫, ೧೯೪೮, ೧೯೪೯, ೧೯೫೦, ೧೯೫೧, ೧೯೫೨. ೧೯೫೩, ೧೯೫೭, ೧೯೮೫, ೧೯೮೭.... ಹೀಗೆ) ಪತ್ರ ವ್ಯವಹಾರ ಜೀವನ

ವಿನ್ಯಾಸದ ಅನಿವಾರ್ಯದ ಭಾಗವಾಗಿತ್ತು ಎಂದೆನಿಸುತ್ತಿದೆ. ಸಹೃದಯ ಓದುಗರ ಪ್ರಶ್ನೆ, ಅನುಮಾನಗಳಿಗೆ ಲೇಖಕರು ಸುದೀರ್ಘವಾಗಿ ಉತ್ತರಿಸುವ, ಕಿರಿಯ ಸಾಹಿತಿಗಳನ್ನು ಪ್ರೋತ್ಸಾಹಿಸುವ ಕ್ರಮವಿತ್ತು. ಇಂತಹ ಸಂಗತಿಗಳನ್ನೊಳಗೊಡ ಕೈಲಾಸಂ, ಮಾಸ್ತಿ, ಗೋವಿಂದ ಪೈ, ಕುವೆಂಪು, ಶಿವರಾಮ ಕಾರಂತ, ಸೇಡಿಯಾಪು ಕೃಷ್ಣಭಟ್ಟರ ಮುಂತಾದವರ ಪತ್ರ ಪುಸ್ತಕ ಹಾಗು ಕೆಲವು ಸಾಹಿತಿಗಳ ಆತ್ಮಕತೆಯಲ್ಲಿ ಸಾಂದರ್ಭಿಕವಾಗಿ ಬಳಕೆಯಾದ ಪತ್ರಗಳನ್ನು ಗಮನಿಸಿದರೆ ಈ ಸಂಶೋಧನಾಧ್ಯಯನ ಮುಖ್ಯವೆನಿಸುತ್ತದೆ.

ಕನ್ನಡ ಸಾಹಿತ್ಯದಲ್ಲಿನ ಪತ್ರಗಳು, ಪತ್ರ ಪುಸ್ತಕ ಸಂಪಾದಿತ (ಭಾಷಾಂತರ, ಅನುವಾದಿಸಿದ ಪತ್ರ ಪುಸ್ತಕಗಳು ಕೂಡ ಇವೆ) ಕೃತಿಗಳು ಸಮಾಜದಲ್ಲಿ ಕಂಡುಬರುವ ಸಾಹಿತಿಗಳು, ಬುದ್ಧಿ ಜೀವಿಗಳು, ದಾರ್ಶನಿಕರು, ಚಿಂತಕರ ಪತ್ರಗಳನ್ನು ಒಳಗೊಂಡಿವೆ. ಈ ಕೃತಿಗಳನ್ನು ಸಂಶೋಧನ ಅಧ್ಯಯನದಲ್ಲಿ ಮುಖ್ಯ ಆಕರ ಸಾಮಗ್ರಿಗಳಾಗಿ ಬಳಸಿಕೊಳ್ಳಲಾಗಿದೆ. ಬುದ್ಧಿಜೀವಿಗಳ ಪತ್ರಗಳಲ್ಲಿ ದೇಶ, ಭಾಷೆ, ರಾಜಕೀಯ, ಧರ್ಮ–ದೇವರು, ಸಮಾಜದಲ್ಲಿ ಕಂಡುಬರುವ ಸಂಪ್ರದಾಯ, ಜಾತಿ ವ್ಯವಸ್ಥೆ, ಮೂಢನಂಬಿಕೆ, ಅಂಧಶ್ರದ್ಧೆ ಮುಂತಾದ ವಿಷಯ ಸಂಗತಿಗಳ ಸಂಬಂಧಿತ ಚರ್ಚೆಗಳು ಗೋಚರಿಸಿವೆ. ಕನ್ನಡದ ಸಾಹಿತಿಗಳು ಇತರರೊಂದಿಗೆ ವ್ಯವಹರಿಸಿದ ಪತ್ರಗಳಲ್ಲಿ ಸಾಂಸ್ಕೃತಿಕ ಹಾಗೂ ಸಾಹಿತ್ಯಕ ವಿಷಯ ಸಂಬಂಧವಾದ ಮಾಹಿತಿಗಳು ಈ ಸಂಶೋಧನಾಧ್ಯಯನದ ಮೂಲಕ ಕಂಡುಕೊಳ್ಳಲಾಗಿದೆ. ಸಾಹಿತಿಗಳು ತಾವು ವವ್ಯಹರಿಸಿದ ಪತ್ರಗಳಲ್ಲಿ ತಮ್ಮ ಪ್ರದೇಶ, ಭಾಷೆ, ಧರ್ಮ ಮೀರಿ ಸಾಹಿತ್ಯಕ ವಿಚಾರಗಳೊಂದಿಗೆ ನಾಡು–ನುಡಿ, ಆಚಾರ–ವಿಚಾರ, ನಂಬಿಕೆ, ಕೌಟುಂಬಿಕ ವಿಚಾರ, ಸಮಾನತೆಯ ಬಗೆಗೆ ಚರ್ಚಿಸಿದ್ದಾರೆ. ಇಂತಹ ಪತ್ರಗಳು ಪತ್ರ ಪುಸ್ತಕ ಮಾತ್ರವಲ್ಲದೇ ಅಭಿನಂದನಾ, ಆತ್ಮ ಚರಿತ್ರೆ, ಜೀವನ ಚರಿತ್ರೆ, ಸಂಸ್ಮರಣ ಗ್ರಂಥಗಳಲ್ಲಿ ಸಾಂದರ್ಭಿಕವಾಗಿ ಪ್ರಕಟವಾಗಿರುವುದನ್ನು ಈ ಅಧ್ಯಯನದಲ್ಲಿ ವಿವೇಚಿಸಲಾಗಿದೆ.

ಇಲ್ಲಿಯವರೆಗೂ ಪತ್ರ ಸಂಸ್ಕೃತಿ ಹಾಗೂ ಪತ್ರ ಪುಸ್ತಕಗಳ ಕುರಿತಂತೆ ಬಿಡಿಲೇಖನಗಳು ಪ್ರಕಟಗೊಂಡಿವೆಯೇ ಹೊರತು ಪತ್ರ ಸಾಹಿತ್ಯದ ಕುರಿತು ಸಮಗ್ರ ಸಂಶೋಧನೆ ಇದುವರೆಗೂ ಜರುಗದಿರುವುದು ವಿಪರ್ಯಾಸವಾಗಿದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನ ಮಹತ್ವಪೂರ್ಣವಾಗಿದೆ. ಒಬ್ಬ ಬರಹಗಾರನ ಪತ್ರಗಳನ್ನು ಸಂಗ್ರಹಿಸಿ, ಪ್ರಕಟಿಸಲು ಹೊರಟಾಗ ಹಲವು ಸವಾಲುಗಳು ಇದಿರಾಗುವುದು ಸ್ವಾಭಾವಿಕ. ಪತ್ರ ಲೇಖನವನ್ನು ಅವರ ಒಟ್ಟು ಬರಹದ ಒಂದು ಅಂಗವಾಗಿ ಪರಿಗಣಿಸಬೇಕೇ? ಅಥವಾ, ಅವರ ಬದುಕು–ಬರಹಗಳ ನಡುವೆ ಕೊಂಡಿ ಬೆಸೆಯುವ ಸಾಧನವಾಗಿ ಪತ್ರಗಳನ್ನು ಓದಬೇಕೇ? ಪ್ರಕಟನೆಯ ಮೂಲಕ ಪತ್ರಗಳ ವೈಯಕ್ತಿಕ ಸ್ವರೂಪವನ್ನು ಅಲ್ಲಗಳೆಯುತ್ತಿದ್ದೇವೆಯೇ? ಪತ್ರಗಳ ಆಯ್ಕೆಯ ಹಿಂದಿನ ವಿಚಾರಗಳೇನು? ಇತ್ಯಾದಿ ಈ ಸವಾಲುಗಳಿಂದ ಪತ್ರಗಳ ಸಂಪಾದಿತ ಕಾರ್ಯವು ಸಂಕುಚಿತಗೊಳ್ಳದೇ, ಹೊಸ ಸಾಧ್ಯತೆಗಳನ್ನು ತೆರೆಯುವಂತೆ ಹೆಚ್ಚು ಹೆಚ್ಚು ಪತ್ರ ಪುಸ್ತಕಗಳು ಪ್ರಕಟವಾಗುವಂತಾಗಬೇಕು ಎನ್ನುವುದು ಈ ಸಂಶೋಧನಾಧ್ಯಯನದ

ಆಶಯವಾಗಿದೆ. ಇದರಿಂದ ಒಂದು ಕಾಲಘಟ್ಟದಲ್ಲಿದ್ದ ಪತ್ರ ಸಂಸ್ಕೃತಿಯ ಪತ್ರಗಳು ಈಗ ಕಡಿಮೆಯಾದ ಸಂದರ್ಭದಲ್ಲಿ ಇಂತಹ ಅಧ್ಯಯನಗಳು ಮುಖ್ಯವೆನಿಸುತ್ತವೆ.

ಈಗಿನ ಕಾಲಮಾನಕ್ಕೆ ಅಸಂಗತವಾದ ಪತ್ರಲೇಖನ ಕೇವಲ ಶಾಲೆಗಳಲ್ಲಿ ಭಾಷಾ ವಿಷಯಗಳಿಗೆ ಹಾಗೂ ಕಛೇರಿ ವ್ಯವಹಾರಗಳಿಗೆ ಮಾತ್ರ ಮೀಸಲಾಗಿವೆ. ಒಂದು ಕಾಲದಲ್ಲಿ ಪರಸ್ಪರರ ನಡುವೆ ಸಂವಹನ ಸೇತುವಾಗಿದ್ದುದು ಪತ್ರಗಳೇ. ಆದರೀಗ ವಿಜ್ಞಾನ ಹಾಗೂ ತಂತ್ರಜ್ಞಾನದ ಫಲ ಶೃತಿಯಿಂದ ಪತ್ರ ಸಂವಹನ ಅಪ್ರಸ್ತುತ. ಹಾಗಾಗಿ ಪತ್ರ ಪುಸ್ತಕಗಳು ಕಾಲದ ವೈರುಧ್ಯದ ಕುರುಹಾಗಿ ಕಾಣುತ್ತವೆ. ಪತ್ರಗಳು ಸಾಹಿತಿಗಳ ಮನೋಲೋಕದ ಭಾವ ಪ್ರಪಂಚವನ್ನು ನಮ್ಮ ಮುಂದೆ ತೆರೆದಿಡುತ್ತಿವೆಯಾದರೂ ವಾಸ್ತವದ ನೆಲೆಗಟ್ಟಿನಲ್ಲಿ ಬೇರೊಂದನ್ನು ಹೇಳಲು ಪ್ರಯತ್ನಿಸುತ್ತಿವೆ. ಪತ್ರಗಳೇ ಮರೆಯಾಗಿರುವ ಹಾಗೂ ಮಾನಸಿಕ ಕ್ಷೋಭೆಗೆ ಬಹುಬೇಗ ಈಡಾಗುತ್ತಿರುವ ಈ ಹೊತ್ತಿನಲ್ಲಿ ಮಾನಸಿಕ ತುಮುಲಗಳು ಮತ್ತು ಕ್ಷೋಭೆಗೆ ಮದ್ದಾಗುವ ಸಾಮರ್ಥ್ಯವನ್ನು ಹೊಂದಿರುವ ಪತ್ರ ಪುಸ್ತಕಗಳ ಮಹತ್ವವನ್ನು ಈ ಕಾಲಕ್ಕೆ ಮುಟ್ಟಿಸುವುದೇ ಇದರ ಹಿಂದಿರುವ ನನ್ನ ಸಂಶೋಧನಾಧ್ಯಯನದ ಮುಖ್ಯ ಉದ್ದೇಶವಾಗಿದೆ. ಪರಿಣಾಮ ಇದಕ್ಕೊಂದು ತಾತ್ವಿಕ ನೆಲಗಟ್ಟೂ ಸಿಕ್ಕ ಹಾಗಾಗುತ್ತದೆ.

ಅಧ್ಯಾಯ: ೨ ಪತ್ರದ ಪರಿಚಯ

ಪತ್ರದ ಅರ್ಥ, ಸ್ವರೂಪ, ಪ್ರಕಾರ, ಪತ್ರದ ಸಂಸ್ಕೃತಿಯ ಮಹತ್ವ ಹಾಗೂ ಸಾಹಿತ್ಯ ಚರಿತ್ರೆಯ ಪತ್ರಗಳು ಬಗೆಗೆ ವಿಶ್ಲೇಷಿಸಲಾಗಿದೆ. ಈ ಮೊದಲು ಇವುಗಳ ಸಂಬಂಧಿ ಸಂಶೋಧನ ಅಧ್ಯಯನ ನಡೆಯದ ಕಾರಣ, ಶೋಧನಾತ್ಮಕವಾಗಿ ಇಲ್ಲಿ ಹೆಚ್ಚು ವಿಸ್ತೃತವಾಗಿ ವಿವೇಚಿಸಲಾಗಿದೆ. ಪತ್ರದ ಅರ್ಥ, ಸ್ವರೂಪ, ಪ್ರಕಾರದ ಬಗೆಗೆ ವ್ಯಾಕರಣ ಪುಸ್ತಕ, ವ್ಯವಹಾರಿಕ ಕನ್ನಡ, ಆಡಳಿತ ಕನ್ನಡ, ನಿಘಂಟು ಹಾಗೂ ಶಬ್ದಾರ್ಥ ಪುಸ್ತಕಗಳನ್ನು ಆಕರಗಳಾಗಿಟ್ಟುಕೊಂಡು ನಿರ್ವಚಿಲಾಗಿದೆ. ಪತ್ರ ಸಂಸ್ಕೃತಿಯ ಮಹತ್ವದ ಕುರಿತು ಪತ್ರಿಕಾ ಲೇಖನಗಳು, ಪತ್ರ ಪುಸ್ತಕಗಳಲ್ಲಿರುವ ಮುನ್ನುಡಿ, ಪ್ರಸ್ತಾವನೆ ಹಾಗೂ ಪತ್ರ ವ್ಯವಹಾರದ ಬಗೆಗೆ ಹಿರಿಯರ ಅನುಭವದ ಮಾತುಗಳನ್ನು ಗ್ರಹಿಸಿಕೊಂಡು ವಿವೇಚಿಲಾಗಿದೆ. ಸಾಹಿತ್ಯ ಚರಿತ್ರೆಯಲ್ಲಿ ಪತ್ರಗಳು ಪರಿಕಲ್ಪನೆಯನ್ನು ಗುರುಪಾದ ಮರಿಗುದ್ದಿ ಅವರ 'ಪತ್ರ ಸಾಹಿತ್ಯ' ಎನ್ನುವ ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಉಪನ್ಯಾಸ ಮಾಲಿಕೆಯ ಕಿರುಪುಸ್ತಕ, ಎಲ್. ಎಸ್. ಶೇಷಗಿರಿರಾಯರು ಸಂಪಾದಿಸಿದ "ಭಾರತೀಯ ಸಾಹಿತ್ಯ ಸಮೀಕ್ಷೆ" ಎನ್ನುವ ಬೃಹತ್ ಗ್ರಂಥ ಮತ್ತು ಕನ್ನಡದ ಪ್ರಾಚೀನ, ಮಧ್ಯಕಾಲದ, ಆಧುನಿಕ ಕಾಲದ ಕೃತಿಗಳನ್ನು ಪರಾಮರ್ಶಿಸಿ, ನಿರ್ವಚಿಸಲಾಗಿದೆ.

ಅಧ್ಯಾಯ: ೩ ಪತ್ರ ಸಾಹಿತ್ಯ

ಇಲ್ಲಿ ಪತ್ರ ಸಾಹಿತ್ಯದ ಸ್ವರೂಪ, ಪತ್ರ ಸಾಹಿತ್ಯದ ಮಹತ್ತು, ಚರಿತ್ರೆ ಹಾಗೂ ಕನ್ನಡ ಪತ್ರ ಸಾಹಿತ್ಯದ ಪರಂಪರೆ(ಬೆಳೆದು ಬಂದ ಕ್ರಮ) ಇವುಗಳಿಗೆ ಸಂಬಂಧಿಸಿದಂತೆ ಗುರುಪಾದ ಮರಿಗುದ್ದಿಯವರ "ಪತ್ರ ಸಾಹಿತ್ಯ" ಎನ್ನುವ ಕಿರು ಪುಸ್ತಕ, ಕರ್ನಾಟಕ ವಿಶ್ವವಿದ್ಯಾಲಯದ ಪ್ರಸಾರಾಂಗದವರು ಪ್ರಕಟಪಡಿಸಿದ "ಆಧುನಿಕ ಕನ್ನಡ ಸಾಹಿತ್ಯದ ರೂಪಗಳು" (೧೯೯೬) ಇಲ್ಲಿರುವ ಗುರುಪಾದ ಮರಿಗುದ್ದಿಯವರ 'ಪತ್ರ ಸಾಹಿತ್ಯ' ಲೇಖನ, ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯವರು ೨೦೦೭ರಲ್ಲಿ ಪ್ರಕಟಪಡಿಸಿದ "ಕನ್ನಡ ವಿಷಯ ವಿಶ್ವಕೋಶ ಕರ್ನಾಟಕ ಸಂಪುಟ-೨" ಇದರಲ್ಲಿರುವ 'ಪತ್ರ ಸಾಹಿತ್ಯ' ಲೇಖನವನ್ನು ಈ ಅಧ್ಯಾಯದ ಅಧ್ಯಯನದಲ್ಲಿ ಬಳಸಿಕೊಂಡು ವಿವೇಚಿಸಿದ್ದೇನೆ.

ಕಪಟರಾಳ ಕೃಷ್ಣರಾಯರ "ಮಗಳಿಗೆ ತಂದೆಯ ಓಲೆಗಳು", ಸಿ. ಕೃಷ್ಣರ "ಮುಗುದೆಯ ಕಾಗದಗಳು", ಎಸ್. ವಿ. ಕೃಷ್ಣಮೂರ್ತಿರಾವ್ ಅವರ "ದಿಲ್ಲಿಯ ಕಾಗದಗಳು", ಮಾಸ್ತಿಯವರ "ಸಾಹಿತ್ಯಲಾಲನೆ", ಶ್ರೀನಿವಾಸ ಹಾವನೂರರು, ಜಿ. ಪಿ. ರಾಜರತ್ನಂ ಅವರು ಪ್ರತ್ಯೇಕವಾಗಿ ಸಂಪಾದಿಸಿರುವ ಗೋವಿಂದ ಪೈ ಅವರ ಪತ್ರಗಳು, ಎಂ. ರಾಮಚಂದ್ರ ಅವರು ಸಂಪಾದಿಸಿರುವ "ಪತ್ರಾವಳಿ" (ಸೇಡಿಯಾಪು ಕೃಷ್ಣಭಟ್ಟರ ಪತ್ರಗಳು), ಹರಿಹರಪ್ರಿಯ ಅವರು ಸಂಪಾದಿಸಿರುವ "ಬನ್ನಂಜೆ ಗೋವಿಂದಾಚಾರ್ಯರ ಪತ್ರಗಳು", ನರೇಂದ್ರ ರೈ ದೇರ್ಲ ಅವರು ಸಂಪಾದಿಸಿರುವ "ತೇಜಸ್ವಿ ಪತ್ರಗಳು", ಬಸವರಾಜು ಡೋಣೂರು ಅವರು ಸಂಪಾದಿಸಿರುವ "ಪತ್ರಾವಲಿ". ಇಂತಹ ಪತ್ರ ಪುಸ್ತಕದ ಮುನ್ನುಡಿ, ಅರಿಕೆ, ಪ್ರಸ್ತಾವನೆ ಹಾಗೂ ಸಂಪಾದಕರ ಮಾತು. ಇವುಗಳ ಆಧಾರದ ಈ ಅಧ್ಯಾಯದ ಪರಿಕಲ್ಪನೆಗಳನ್ನು ನಿರ್ವಚಿಸಲಾಗಿದೆ.

ಅಧ್ಯಾಯ: ೪ ಕನ್ನಡ ಪತ್ರ ಸಾಹಿತ್ಯದ ವಿವೇಚನೆ

ಮಹಾಪ್ರಬಂಧದಲ್ಲಿ ಈ ಅಧ್ಯಾಯ ದೊಡ್ಡದು. ಮೂನ್ನೂರಕ್ಕೂ ಹೆಚ್ಚು ಪುಟಗಳಲ್ಲಿ ಆವರಿಸಿದೆ. ಕನ್ನಡದಲ್ಲಿ ಪ್ರಕಟವಾದ ಪತ್ರಗಳ ಪುಸ್ತಕಗಳು (ಅನುವಾದ ಪುಸ್ತಕಗಳು ಸೇರಿ), ಇತರ ಗ್ರಂಥಗಳನ್ನು ಹಾಗೂ ಸಾಹಿತಿಗಳು ವ್ಯವಹರಿಸಿದ ಪತ್ರಗಳ ನೆರಳಚ್ಚು (ಝುರಾಕ್ಸ) ಪ್ರತಿ ಅಪ್ರಕಟಿತ ಪತ್ರಗಳ ಹಿನ್ನೆಲೆಯಲ್ಲಿ ನಿರ್ವಚಿಸಲಾಗಿದೆ. ೧. **ಸಮಗ್ರ ಪತ್ರಗಳ ಪುಸ್ತಕಗಳು** ಈ ಪರಿಕಲ್ಪನೆಯ ಉಪ ಅಧ್ಯಾಯದಲ್ಲಿ ಪತ್ರಗಳು ಸಮಗ್ರವಾಗಿ ಕೃತಿರೂಪದಲ್ಲಿವೆ. ಇದರಲ್ಲಿ ಮೊದಲಿಗೆ ಬರುವ ಅ) ಪತ್ರ ಶೈಲಿಯ ಕೃತಿಗಳು- ಇಲ್ಲಿ ಇತರ ಸಾಹಿತ್ಯಕ (ಕಾದಂಬರಿ, ಅಂಕಣ, ಪ್ರಬಂಧ ಇತ್ಯಾದಿ) ಪುಸ್ತಕಗಳು ಪತ್ರದ ಶೈಲಿಯಲ್ಲಿ ನಿರೂಪಿಸಲ್ಪಟ್ಟಿವೆ. ಮುಗುದೆಯರ ಪತ್ರಗಳು, ಜೀವನ ಪಾಠಗಳು (ಪ್ರಬಂಧ), ಮಗಳಿಗೊಂದು ಪತ್ರ (ಅಂಕಣ ಬರಹ), ತಾರಾಬಾಯಿಯ ಪತ್ರ (ಕಾದಂಬರಿ) ಇತ್ಯಾದಿ ಕೃತಿಗಳು. ಆ) ನಿಜ ಪತ್ರಗಳ ಸಂಕಲನಗಳು- ಇಲ್ಲಿ ವ್ಯವಹರಿಸಿದ (ನಿಜ) ಪತ್ರಗಳನ್ನು ಪುಸ್ತಕಗಳು ಹೊಂದಿವೆ. ದಿಲ್ಲಿಯ ಪತ್ರಗಳು, ನಮ್ಮ ಕಾಗದಗಳು,

ಸಾಹಿತ್ಯಲಾಲನೆ, ಕುವೆಂಪು ಪತ್ರಗಳು, ತುಡಿತ, ಎಂ. ಗೋವಿಂದ ಪೈಯವರ ಕೆಲವು ಪತ್ರಗಳು ಇತ್ಯಾದಿ ಇ) ಅನುವಾದ ಪತ್ರ ಪುಸ್ತಕಗಳು– ಇಲ್ಲಿ ಜಾಗತಿಕ ಹಾಗೂ ರಾಷ್ಟ್ರಮಟ್ಟದ ಪ್ರಸಿದ್ಧ ಚಿಂತಕರ, ಸಾಹಿತಿಗಳ ಪತ್ರ ಪುಸ್ತಕಗಳು ಬೇರೆ ಬೇರೆ ಭಾಷೆಗಳಿಗೆ ಅನುವಾದ, ಭಾಷಾಂತರಗಳಾಗಿವೆ. ಹಾಗೆಯೇ ಕನ್ನಡದಲ್ಲಿಯೂ ಆಗಿವೆ. ಮಗಳಿಗೆ ತಂದೆಯ ಓಲೆಗಳು, ಮೋಪಾಸನ ಓಲೆಗಳು, ಮಹಾತ್ಮ ಗಾಂಧೀಜಿಯವರ ರಾಜಕೀಯ ಪತ್ರಗಳು, ಪತ್ರಗುಚ್ಛ, ಸ್ವಾಮಿ ವಿವೇಕಾನಂದ ಪತ್ರಮಾಲೆ, ಇಂತಿ ನಿನ್ನ ಬಾಪು, ಮಾತಾನಾಡುವ ದಾಖಲೆಗಳು, ಡಾ॥ ಬಿ. ಆರ್. ಅಂಬೇಡ್ಕರ್‌ರ ಪತ್ರಗಳು, ಖಲೀಲ್ ಗಿಬ್ರಾನ್ ಪ್ರೇಮ ಪತ್ರಗಳು, ಯುವಕವಿಗೆ ಬರೆದ ಪತ್ರಗಳು ಇತ್ಯಾದಿ ಪತ್ರ ಪುಸ್ತಕಗಳನ್ನು ವಿವೇಚಿಸಲಾಗಿದೆ. ೨. **ಪತ್ರಗಳು ಒಂದು ಭಾಗವಾಗಿರುವ ಪುಸ್ತಕಗಳು–** ಇಡೀ ಕೃತಿಯಲ್ಲಿ ಪತ್ರಗಳು ಮಾತ್ರವಿರದೇ ಇತರ ಸಂಗತಿಗಳಿರುತ್ತವೆ. ಕೈಲಾಸಂ ನೆನಪು, ದೀವಿಗೆ ಭಾಗ–೧, ಮಣಿಹ, ಬೆಳಕಿನ ಬೀಜ, ಚಿತ್ರಗಳು – ಪತ್ರಗಳು, ಉಪಕುಲಪತಿಗಳಿಗೆ ಪತ್ರಗಳು, ಚಂದ್ರಯ್ಯ ನಾಯ್ಡು ಅವರು ಸಂಪಾದಿಸಿರುವ ಹಾಮಾನಾ, ದೇಜಗೌ ಹಾಗೂ ಸಿಪಿಕೆಯವರ ಪತ್ರಗಳು–ಚಿತ್ರಗಳು, ನನ್ನ ತೇಜಸ್ವಿ, ಒಡನಾಟದ ನೆನಪುಗಳು, ಇತ್ಯಾದಿ ಪುಸ್ತಕಗಳನ್ನು ಅಧ್ಯಯನಕ್ಕೆ ಬಳಸಿಕೊಂಡು ನಿರ್ವಚಿಸಲಾಗಿದೆ. ೩. **ಪತ್ರಗಳಿರುವ ಅಭಿವಂದನ, ಆತ್ಮಚರಿತ್ರೆ, ಜೀವನ ಚರಿತ್ರೆ, ಸಂಸ್ಮರಣ ಕೃತಿಗಳು–** ಇಲ್ಲಿ ಸಾಹಿತಿಗಳು, ಚಿಂತಕರು, ಪ್ರಸಿದ್ಧ ವ್ಯಕ್ತಿಗಳು ವ್ಯವಹರಿಸಿದ ಪತ್ರಗಳು ಸಾಂದರ್ಭಿಕವಾಗಿ ಪ್ರಕಟವಾಗಿವೆ. ಸೌಜನ್ಯ, ಹಣತೆ, ಸಹೃದಯಿ, ಅನುಪಮಾ ಅಭಿನಂದನ, ಇಷಾಂಶು, ಅಕ್ಕರೆ, ನೆನಪಿನ ದೋಣಿಯಲ್ಲಿ, ಕಾದಂಬರಿಕಾರನ ಕಥೆ, ಹೋರಾಟದ ಹಾದಿ, ಅನುದಿನದ ಅಂತರಗಂಗೆ, ರಾಷ್ಟ್ರಕವಿ ಕುವೆಂಪು, ಮಹಾಕವಿ ಮುದ್ದಣ, ಮುದ್ದಣನಿಗೆ ನಮನ, ಶ್ರೀಗಂಧ: ಬಿ. ಎಂ. ಶ್ರೀ ಸಂಸ್ಮರಣ ಸಂಚಿಕೆ, ಬಿ. ಜಿ. ಎಲ್ ಸ್ವಾಮಿ, ಸಂಸ ಸ್ಮರಣೆ, ಸಹಯಾನ, ಅಶ್ವತ್ಥರ ಬದುಕು: ಒಂದು ನೋಟ ಮುಂತಾದ ಕೃತಿಗಳಲ್ಲಿರುವ ಪತ್ರಗಳನ್ನು ಈ ಉಪ ಅಧ್ಯಾಯದಲ್ಲಿ ವಿವೇಚಿಸಲಾಗಿದೆ. ೪. **ಸಾಹಿತಿಗಳ ಅಪ್ರಕಟಿತ ಬಿಡಿಪತ್ರಗಳು–** ಅಧ್ಯಯನ ಸಂಬಂಧಿ ಕ್ಷೇತ್ರ ಅಧ್ಯಯನದ ಮೂಲಕ ಅರವಿಂದ ಮಾಲಗತ್ತಿ, ಏರ್ಯ ಲಕ್ಷ್ಮೀನಾರಾಯಣ ಆಳ್ವ, ಚೆನ್ನವೀರ ಕಣವಿ, ಜಿ. ಎಸ್. ಅಮೂರ, ಗಿರಡ್ಡಿ ಗೋವಿಂದರಾಜ, ಬಿ. ಎ. ಸನದಿ, ಶ್ರೀಪಾದ ಶೆಟ್ಟಿಯವರ ಪತ್ರಗಳನ್ನು ಸಂಗ್ರಹಿಸಿ ಈ ಉಪ ಅಧ್ಯಾಯದ ಅಧ್ಯಯನದಲ್ಲಿ ನಿರ್ವಚಿಸಿದ್ದೇನೆ.

ಅಧ್ಯಾಯ: ೫ ಆಧುನಿಕ ಕನ್ನಡ ಸಾಹಿತಿಗಳ ಪತ್ರಗಳಲ್ಲಿ ಸಾಹಿತ್ಯಕ ಅಂಶಗಳು

ಈ ಮುಖ್ಯ ಅಧ್ಯಾಯದಲ್ಲಿ ನವೋದಯ ಪೂರ್ವ, ನವೋದಯ, ಪ್ರಗತಿಶೀಲ, ನವ್ಯ ಮತ್ತು ದಲಿತ–ಬಂಡಾಯ ಸಾಹಿತ್ಯ ಕಾಲದ ಪರಂಪರೆಯಲ್ಲಿ ಗುರುತಿಸಿಕೊಂಡ ಕವಿಗಳ, ಲೇಖಕರ ಪತ್ರಗಳಲ್ಲಿ ಸಾಹಿತ್ಯಕ ಅಂಶಗಳ ಕುರಿತಂತೆ ಸ್ಥೂಲ ವಿವರಗಳನ್ನು ಇಲ್ಲಿ ಪ್ರಸ್ತಾವಿಸಲಾಗಿದೆ. ಸಮಗ್ರ ಪತ್ರ ಪುಸ್ತಕಗಳು,

ಒಂದು ಭಾಗವಾಗಿರುವ ಕೃತಿಗಳು, ಜೀವನ ಚರಿತ್ರೆ, ಆತ್ಮಕತೆ, ಪ್ರವಾಸ ಕಥನ, ಅಭಿನಂದನ ಮುಂತಾದ ಗ್ರಂಥಗಳ ಮೂಲಕ ಸಂಗ್ರಹಿಸಿದ ಸಾಹಿತ್ಯಕ ಪತ್ರಗಳನ್ನು ಆಧರಿಸಿ ನಿರ್ವಚಿಸಲಾಗಿದೆ. ಹೀಗೆ ಸಂಶೋಧನಾ ಅಧ್ಯಯನದ ವಿಷಯಕ್ಕೆ ಸಂಬಂಧಪಟ್ಟಂತೆ ಅಧ್ಯಾಯ, ಉಪ ಅಧ್ಯಾಯವಾರು ವಿಂಗಡಿಸಿ, ಪತ್ರ ಪುಸ್ತಕಗಳು, ಪತ್ರಗಳು, ಇತರ ಗ್ರಂಥಗಳು ಹಾಗೂ ಸಾಹಿತಿಗಳ ಅಪ್ರಕಟಿತ ಬಿಡಿ ಪತ್ರಗಳನ್ನು ಅನುಲಕ್ಷಿಸಿ ಮಹಾಪ್ರಬಂಧದಲ್ಲಿ ಸಮಗ್ರ ವಿಶ್ಲೇಷಣೆಯನ್ನು ನಡೆಸಲಾಗಿದೆ._ಪತ್ರಗಳು, ಪತ್ರ ಪುಸ್ತಕಗಳು ಒಳಗೊಂಡಿರುವ ಸಾಹಿತ್ಯಕ ಅಂಶಗಳಿಗೆ ಹೆಚ್ಚು ಒತ್ತನ್ನು ನೀಡಿ ನನ್ನ ಸಂಶೋಧನಾ ಅಧ್ಯಯನದ ಪ್ರಬಂಧದಲ್ಲಿ ವಿವೇಚಿಸಲಾಗಿದೆ.

ಕನ್ನಡದಲ್ಲಿ ಪತ್ರ ಸಾಹಿತ್ಯ ಪ್ರಕಾರದ ಸಾಲಿನಲ್ಲಿ ನಿಲ್ಲುವ ಅಪರೂಪ ಪತ್ರ ಪುಸ್ತಕಗಳು ಸಾಕಷ್ಟಿವೆ. ಪತ್ರಗಳು ಮುಂದೊಂದು ದಿನ ಪುಸ್ತಕ ರೂಪ ತಾಳುತ್ತವೆ ಎಂದು ಪತ್ರ ವ್ಯವಹರಿಸಿದ ಸಾಹಿತಿಗಳಿಗೆ ಬಹುಶಃ ಗೊತ್ತಿರಲಿಲ್ಲ ಅನಿಸುತ್ತದೆ. ವಿನೋದ, ವಿಡಂಬನೆ, ಚಾಟಿ ಏಟು, ನೇವರಿಕೆ, ಕಿವಿ ಹಿಂಡಿ ದಾರಿತೋರಿಸುವುದು. ಹೀಗೆ ಎಲ್ಲವೂ ಪರಸ್ಪರರ ಪತ್ರಗಳಲ್ಲಿ ಮಿಳಿತಗೊಂಡಿವೆ. ಸಾಹಿತ್ಯ ವಿಷಯಗಳಿಗೆ ಸಂಬಂಧಿಸಿದ ಪತ್ರಗಳು ಸಾಹಿತಿಯನ್ನು ಮಾತ್ರ ಲಾಲಿಸುವುದಿಲ್ಲ; ಬೆಳೆಯುತ್ತಿರುವ ಸಾಹಿತ್ಯ ಪ್ರೇಮಿಗಳ ಸಾಹಿತ್ಯ ಜ್ಞಾನವನ್ನು ಪೋಷಿಸುತ್ತವೆ. ಈ ಎರಡು ಕಾರಣಗಳಿಂದಲೇ ಪತ್ರ ಪುಸ್ತಕಗಳಿಗೆ ಸಾಹಿತ್ಯ ಚರಿತ್ರೆಯಲ್ಲಿ ಒಂದು ಸ್ಥಾನವಿರುವುದು. ಕನ್ನಡ ಭಾಷೆಗಾಗಿ ಜೀವನಪೂರ್ತಿ ಪ್ರಾಮಾಣಿಕವಾಗಿ ದುಡಿದ ಸಾಹಸಿ ಶ್ರೀ ಎಂ. ಗೋವಿಂದ ಪೈ ಅವರು ತಮ್ಮ ಪತ್ರಗಳ ಮೂಲಕ ಹಲವಾರು ಉದಯೋನ್ಮುಖ ಸಾಹಿತಿಗಳನ್ನು ಪ್ರೋತ್ಸಾಹಿಸಿದ್ದಾರೆ. "ಬೆಳೆಯುವ ಪೈರಿಗೆ ಬಿಸಿನೀರಿನ ಶಾಖ ಮಾರಕ" ಎಂದೇ ಅವರು ಭಾವಿಸಿದ್ದರು. ಸಾಹಿತ್ಯದಲ್ಲಿ ಆಸಕ್ತಿ ತೋರಿಸಿದ ಎಲ್ಲರಿಗೂ– ವಯಸ್ಸಿನ ಭೇದವಿಲ್ಲದೆ, ಲಿಂಗಭೇದವಿಲ್ಲದೇ ಯಾವ ರೀತಿಯ ತಾರತಮ್ಯವಿಲ್ಲದೆ ಪೈಯವರು ಪ್ರೋತ್ಸಾದ ನೀರೆರೆದಿದ್ದಾರೆ.

ಪ್ರಸ್ತುತ ಸಂಶೋಧನ ಅಧ್ಯಯನದಲ್ಲಿ ಪತ್ರ ಪುಸ್ತಕಗಳು, ಸಾಹಿತ್ಯದ ಇತರ ಕೃತಿಗಳಲ್ಲಿರುವ ಪತ್ರಗಳಲ್ಲಿನ ಸಾಹಿತ್ಯಕ ಅಂಶಗಳನ್ನು ಗುರುತಿಸಿ ವಿವೇಚನೆಗೊಳಪಡಿಸಲಾಗಿದೆ. ಸಂಶೋಧನಾ ಮಹಾಪ್ರಬಂಧದ ವಿಷಯವಾದ "ಕನ್ನಡದಲ್ಲಿ ಪತ್ರ ಸಾಹಿತ್ಯ" ಇದರ ಅಧ್ಯಯನದ ದೃಷ್ಟಿಯಿಂದ ಹೊಸಗನ್ನಡ ಸಾಹಿತ್ಯದ ಒಂದು ಪ್ರಕಾರವಾದ 'ಪತ್ರ ಸಾಹಿತ್ಯ'ದ ಪತ್ರ ಪುಸ್ತಕಗಳನ್ನು ಸಂಶೋಧನ ಸಮೀಕ್ಷಾತ್ಮಕ ವಿಧಾನದ ನೆಲೆಯಲ್ಲಿ ಪರಿಚಯಿಸಲಾಗಿದೆ. ಮತ್ತು ಅವು ಒಳಗೊಂಡಿರುವ ನವೋದಯಪೂರ್ವ, ನವೋದಯ, ಪ್ರಗತಿಶೀಲ, ನವ್ಯ, ದಲಿತ–ಬಂಡಾಯ ಸಾಹಿತ್ಯ ಪರಂಪರೆಯ ಕಾಲಘಟ್ಟಗಳಲ್ಲಿ ಬರುವ ಕವಿಗಳ, ಲೇಖಕರ ಪತ್ರಗಳನ್ನು ಮಾತ್ರ ಅಧ್ಯಯನಕ್ಕೆ ತೆಗೆದುಕೊಳ್ಳಲಾಗಿದೆ. ಈ ಘಟ್ಟಗಳಲ್ಲಿ ಗುರುತಿಸಿಕೊಂಡಿರುವ ಸಾಹಿತಿಗಳ ಪತ್ರಗಳು ಒಳಗೊಂಡಿರುವ ಸಾಹಿತ್ಯಕ ಅಂಶಗಳನ್ನು ಗುರುತಿಸುವಲ್ಲಿ ಅಧ್ಯಯನದ ಸಫಲತೆ ಸಾಧಿಸಿದೆ. ಹೊಸಗನ್ನಡ ಸಾಹಿತಿಗಳು ನಡೆಸಿರುವ, ನಡೆಸುವ ಪತ್ರ

ವ್ಯವಹಾರವು ಇಬ್ಬರ ನಡುವೆ ನಡೆಯುವ ಸೀಮಿತವಾದ ರಚನೆಯಾದರೂ ಅದರಲ್ಲಿ ಸಾಹಿತ್ಯಕ ವಿಷಯಗಳ ಜತೆಗೆ– ನಾಡುನುಡಿ, ಧರ್ಮ, ರಾಜಕೀಯ, ಸಾಮಾಜಿಕ, ಆಧ್ಯಾತ್ಮಿಕ, ನೈತಿಕ ಮುಂತಾದ ವಿಷಯಾಂಶಗಳು ಸಮಕಾಲೀನ ಸಂದರ್ಭದ ಕುರಿತಾಗಿ ಬರಹಗಾರರ ವೈಚಾರಿಕತೆ, ಚಿಂತನ ಮಂಥನ, ಜೀವನಾನುಭವಗಳು ಪತ್ರಗಳಲ್ಲಿ ಮೂರ್ತಗೊಂಡಿರುತ್ತವೆ. ಆದರೆ ಇಲ್ಲಿನ ಪತ್ರಗಳಲ್ಲಿ ಸಾಹಿತ್ಯಕ ಅಂಶಗಳನ್ನು ಮಾತ್ರ ಗುರುತಿಸುವ ನಿಟ್ಟಿನಲ್ಲಿ ಸಂಶೋಧನಾಧ್ಯಯನ ಕೈಗೊಳ್ಳಲಾಗಿದೆ.

ಅಧ್ಯಾಯ– ೬ ಸಮಾರೋಪ

ಪ್ರಸ್ತುತ ಸಂಶೋಧನ ಅಧ್ಯಯನದಲ್ಲಿ ಹಲವು ಮಹತ್ವದ ಪತ್ರಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಆಯಾ ಅಧ್ಯಾಯಗಳ ಅನುಸಂಧಾನದ ಸಂದರ್ಭದಲ್ಲಿ ಹುಟ್ಟಿದ ಫಲಿತಗಳನ್ನು ಆಯಾ ಅಧ್ಯಾಯಗಳಲ್ಲಿ ಮಂಡಿಸಲಾಗಿದೆ. ಈ ಮಹಾಪ್ರಬಂಧದ ಕೊನೆಯಲ್ಲಿ ಸಂಶೋಧನಾತ್ಮಕ ಅಧ್ಯಯನದ ಫಲಿತಾಂಶವನ್ನು ಕ್ರೋಡೀಕರಿಸಿ ವಿವೇಚಿಸಲಾಗಿದೆ. ಕನ್ನಡದಲ್ಲಿ ಇಲ್ಲಿಯವರೆಗೂ 'ಪತ್ರ ಸಾಹಿತ್ಯ' ಕುರಿತು ಸಂಶೋಧನಾಧ್ಯಯನ ನಡೆದಿರುವುದಿಲ್ಲ. ಪತ್ರ ಸಂಸ್ಕೃತಿ ಮತ್ತು ಪತ್ರ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಲೇಖನಗಳು ಬಂದರೂ ತುಂಬ ವಿರಳ. ಪತ್ರಗಳು ಕೂಡ ಸಾಹಿತ್ಯದ ಒಂದು ಪ್ರಕಾರವಾಗಿದ್ದು; ಇತ್ತೀಚಿನ ದಿನಮಾನಗಳಲ್ಲಿ ಕನ್ನಡ ಸಾಹಿತ್ಯದಲ್ಲಿ ಪತ್ರ ಪುಸ್ತಕಗಳು ಹೆಚ್ಚಿನ ಸಂಖ್ಯೆಯಲ್ಲಿ ಪ್ರಕಟಗೊಂಡಿರುವ ವಿಷಯ ಸಂಗತಿ ಗೊತ್ತಾಗುವುದು. ಇದು ಸಾಹಿತ್ಯಾಭಿಮಾನಿಗಳಿಗೆ ಹೆಮ್ಮೆನಿಸುತ್ತದೆ. ಪತ್ರ ಸಾಹಿತ್ಯವು ಇತರ ಸಾಹಿತ್ಯ ಪ್ರಕಾರಗಳಿಗಿಂತ ಭಿನ್ನತೆಯಿಂದ ಕೂಡಿದ್ದು; ಸಾಹಿತಿಗಳು ಇತರರೊಂದಿಗೆ ಪರಸ್ಪರ ವ್ಯವಹರಿಸಿದ ಪತ್ರ–ವ್ಯವಹಾರದ ಮುಖ್ಯ ವಿಷಯ ಸಂಗತಿಗಳನ್ನೊಳಗೊಂಡ ಪತ್ರಗಳ ಪುಸ್ತಕಗಳಾಗಿವೆ. ಇವು ಪ್ರಕಟವಾದ ಕಾಲದಲ್ಲಿ ಪತ್ರ ವ್ಯವಹಾರ ವ್ಯಕ್ತಿ ಜೀವನದಲ್ಲಿನ ಪರಸ್ಪರ ಸಂಪರ್ಕದ ಅನಿವಾರ್ಯವಾದ ಭಾಗವಾಗಿತ್ತು. ಸಾಹಿತಿಗಳು ಸಹೃದಯ ಓದುಗರ ಪ್ರಶ್ನೆ, ಅನುಮಾನಗಳಿಗೆ ಲೇಖಕರು ಉತ್ತರಿಸುವ, ಸಾಹಿತ್ಯಕವಾಗಿ ಸಂದಿಗ್ಧ ವಿಷಯ ಸಮಸ್ಯೆಗಳನ್ನು ಪರಿಹರಿಸುವ ಕ್ರಮವಿತ್ತು ಎಂಬುದು ಈ ಅಧ್ಯಯನ ಮಹಾಪ್ರಬಂಧದಲ್ಲಿ ಕಂಡುಕೊಳ್ಳಲಾಗಿದೆ.

ಇಂಗ್ಲಿಷ್ ಭಾಷೆಯಲ್ಲಿ ಸಮೃದ್ಧಿಯಾಗಿ ಮನ್ನಣೆ ಪಡೆದ ಪತ್ರ ಸಾಹಿತ್ಯವು, ಭಾರತದ ಇತರ ಭಾಷೆಗಳಲ್ಲಿ ಪತ್ರ ಸಂಪಾದನೆ ಹಾಗು ಪತ್ರ ಸಾಹಿತ್ಯ ಆರಂಭಗೊಂಡದು ೨೦ನೇ ಶತಮಾನದ ಆರಂಭದ ದಶಕದಲ್ಲಿ. ಕನ್ನಡದಲ್ಲಿ ಮಾಸ್ತಿ, ಗೋವಿಂದ ಪೈ, ಕುವೆಂಪು, ಶಿವರಾಮಕಾರಂತ, ಸೇಡಿಯಾಪು ಕೃಷ್ಣಭಟ್ಟ, ತೇಜಸ್ವಿ ಮೊದಲಾದವರ ಪತ್ರ ಸಾಹಿತ್ಯ, ಕೆಲವು ಸಾಹಿತಿಗಳ ಅಭಿನಂದನಾ ಗ್ರಂಥ, ಆತ್ಮಕತೆಯಲ್ಲಿನ ಪತ್ರಗಳ ವಿಷಯದ ವೈವಿಧ್ಯತೆ ಹಾಗು ಸಾಹಿತ್ಯದ ಇತರ ಪ್ರಕಾರಗಳಿಂತ ಪತ್ರ ಸಾಹಿತ್ಯ ವಿಶೇಷವೆನ್ನುವುದು ಪ್ರಸ್ತುತ ಮಹಾಪ್ರಬಂಧವನ್ನು ಗಮನಿಸಿದರೆ ಈ ಸಂಶೋಧನಾಧ್ಯಯನ ಮುಖ್ಯವೆನಿಸದಿರಲಾರದು. ಹೀಗೆ

ಹೊಸಗನ್ನಡ ಸಾಹಿತ್ಯದ ಒಂದು ಪ್ರಕಾರವಾದ ಪತ್ರ ಪುಸ್ತಕಗಳು ಎರಡು ಬಗೆಯಾಗಿ ಪಾತ್ರ ನಿರ್ವಹಿಸಿವೆ. ಒಂದು ತಂತ್ರವಾಗಿ, ಇನ್ನೊಂದು ವಸ್ತುವಾಗಿ. ಮೊದಲನೆಯದು ಪತ್ರಗಳ ರೂಪ(ಶೈಲಿ)ದಲ್ಲಿ ಕಾದಂಬರಿ, ಅಂಕಣ ಬರಹ, ಪ್ರಬಂಧ, ಲೇಖನ ಸಂಗ್ರಹದಂಥ ಕೃತಿಗಳು. ಇನ್ನೊಂದು ವಾಸ್ತವವಾಗಿ ವ್ಯವಹರಿಸಿದ ಪತ್ರಗಳು ಪುಸ್ತಕ ರೂಪ ತಾಳಿರುವುದು. ಆಧುನಿಕ ಕನ್ನಡ ಸಾಹಿತ್ಯದ ವಿವಿಧ ಕಾಲಘಟ್ಟದ ಸಾಹಿತಿಗಳ ಪ್ರಕಟಿತ ಪತ್ರಗಳು, ಅಭಿವಂದನ, ಆತ್ಮಕತೆ, ಜೀವನ ಚರಿತ್ರೆ, ಸಂಸ್ಮರಣ ಗ್ರಂಥಗಳು ಮತ್ತು ಇತರ ಕೃತಿಗಳಲ್ಲಿ ಸಾಂದರ್ಭಿಕವಾಗಿ ಪ್ರಕಟವಾದ ಪತ್ರಗಳು ಹಾಗೂ ಸಾಹಿತಿಗಳು ಕೊಡಲ್ಪಟ್ಟ ಅಪ್ರಕಟಿತ ಬಿಡಿ ಪತ್ರಗಳನ್ನು ಸಾಹಿತ್ಯಕವಾಗಿ ಅಧ್ಯಯನ ಮಾಡುವ ಪ್ರಯತ್ನ ಈ ಸಂಶೋಧನಾಧ್ಯಯನ ಮಹಾಪ್ರಬಂಧದಲ್ಲಿ ಸಾಧಿಸಲಾಗಿದೆ.

ಅನುಬಂಧದಲ್ಲಿ ಪತ್ರ ವ್ಯವಹಾರ ಸಂಬಂಧಿತ ಪತ್ರ ಸಂಸ್ಕೃತಿಯ ಪಾರಿಭಾಷಿಕ ಪದಗಳು. ಅಧ್ಯಯನದ ವಿಷಯಕ್ಕೆ ಸಂಬಂಧಿಸಿದಂತೆ ಮಾಹಿತಿ (ಪತ್ರಗಳು) ಸಂಗ್ರಹಿಸಲು ಕ್ಷೇತ್ರ ಅಧ್ಯಯನಕ್ಕೆ ಹೋದ ಸಂದರ್ಭದಲ್ಲಿ ಸಂಬಂಧಿಸಿದ ಸಾಹಿತಿಗಳ ಜೊತೆಗೆ ನಾವು ಇರುವ ಛಾಯಾ ಚಿತ್ರಗಳು, ಆಕರ ಗ್ರಂಥಗಳು, ಪರಾಮರ್ಶನ ಗ್ರಂಥ, ಲೇಖನಗಳು ಹಾಗೂ ಈ ಸಂಶೋಧನ ಅಧ್ಯಯನಕ್ಕೆ ಪೂರಕ ಮಾಹಿತಿ ಒದಗಿಸಿದ ಅಂತರ್ಜಾಲದ ವೆಬ್‌ಸೈಟ್ ವಿಳಾಸಗಳ ಕೊಂಡಿಗಳನ್ನು ನೀಡಲಾಗಿದೆ.

ಅಧ್ಯಯನದ ಸಾಧ್ಯತೆಗಳು

ಪ್ರಸ್ತುತ ಸಂಶೋಧನ ಅಧ್ಯಯನದ ಪ್ರಬಂಧದಲ್ಲಿ 'ಕನ್ನಡದಲ್ಲಿ ಪತ್ರ ಸಾಹಿತ್ಯ'ದ ಕುರಿತು ಪ್ರಧಾನವಾಗಿ ಆಕರ ಸಾಮಗ್ರಿಯ ಸಮೀಕ್ಷಾತ್ಮಕ ವಿಧಾನದ ಹಿನ್ನೆಲೆಯಲ್ಲಿ ವಿವೇಚಿಸಲಾಗಿದೆ. ಇದೊಂದು ಅತ್ಯಂತ ವ್ಯಾಪ್ತಿಯುಳ್ಳದಾಗಿದೆ. ಸಮಗ್ರ ಪತ್ರ ಪುಸ್ತಕಗಳು, ಕನ್ನಡ ಅನುವಾದ–ಭಾಷಾಂತರವಾದ ಪತ್ರ ಪುಸ್ತಕ ಮತ್ತು ಸಾಹಿತಿಗಳ ಅಪ್ರಕಟಿತ ಪತ್ರಗಳನ್ನು ಸಂಗ್ರಹಿಸಿ ಪ್ರತ್ಯೇಕ ಹಾಗೂ ಸ್ಥೂಲವಾಗಿ ಅಧ್ಯಯನಕ್ಕೆ ತರುವ ಸಾಧ್ಯತೆಗಳಿವೆ. ಇದರಲ್ಲಿಯೇ ಹೊಸಗನ್ನಡದ ವಿವಿಧ ಕಾಲಘಟ್ಟದ ಸಾಹಿತಿಗಳ ಪತ್ರಗಳು, ಪತ್ರ ಪುಸ್ತಕಗಳನ್ನು ಕುರಿತು ಪ್ರತ್ಯೇಕವಾಗಿ ಇಲ್ಲವೇ ಸಮಗ್ರವಾಗಿ ಅಧ್ಯಯನ ನಡೆಸಬಹುದು. ಪತ್ರ ಪುಸ್ತಕದಲ್ಲಿ ಹೆಚ್ಚು ಪ್ರಕಟವಾಗಿರುವ ಎಂ. ಗೋವಿಂದ ಪೈ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಕುವೆಂಪು, ಪುತಿನ, ಎಂ. ಗೋಪಾಲಕೃಷ್ಣ ಅಡಿಗ, ಪಾಟೀಲ ಪುಟ್ಟಪ್ಪ ಹಾಗೂ ಕೆ. ಪಿ. ಪೂರ್ಣಚಂದ್ರ ತೇಜಸ್ವಿಯವರ ಪತ್ರಗಳಾಗಿವೆ. ಇವು ಒಳಗೊಂಡಿರುವ ಸಾಂಸ್ಕೃತಿಕ ವಿವಿಧ ವಿಷಯಾಂಶಗಳ ಹಿನ್ನೆಲೆಯಲ್ಲಿ ಸೀಮಿತವಾಗಿ ಒಂದೊಂದು ಅಂಶಗಳನ್ನು ಕೂಡ ಆಯ್ದು ಅಧ್ಯಯನಕ್ಕೆ ಒಳಪಡಿಸುವ ಅವಕಾಶಗಳಿವೆ.

ಆಕರ ಗ್ರಂಥಗಳು

1. ಆಚಾರ್ಯ ಕಾ. ರ.(ಅನು), 2001, ಪ್ರೇರಕ ಪತ್ರಗಳು, ಸಾಹಿತ್ಯ ಸಿಂಧು ಪ್ರಕಾಶನ ಬೆಂಗಳೂರು.
2. ಆರ್. ಜಿ. ಡಿ, 1998, ಪತ್ರ ಲೇಖನ ಕೈಪಿಡಿ, ಸಪ್ನ ಬುಕ್ ಹೌಸ್ ಬೆಂಗಳೂರು.
3. ಏರ್ಯ ಲಕ್ಷ್ಮೀನಾರಾಯಣ ಆಳ್ವ, 1971, ಸ್ನೇಹಸೇತು, ಶುಭದಾ ಪ್ರಕಾಶನ ಮೊಡಂಕಾಪು(ದ.ಕ.)
4. ಕಗ್ಗೆರೆ ಪ್ರಕಾಶ, 2003, ಅವಳ ಮಧುರ ಅಮರ ಪತ್ರಗಳು, ಅನಂತ ಪುಸ್ತಕ ಮಾಲೆ, ಬೆಂಗಳೂರು.
5. ಕಗ್ಗೆರೆ ಪ್ರಕಾಶ್, 2018, ಹೇಳೇ ಸಖಿ ಕೇಳೋ ಸಖ, ಪಂಚಮಿ ಮೀಡಿಯಾ ಪಬ್ಲಿಕೇಷನ್ಸ್ ಬೆಂಗಳೂರು.
6. ಕಪಟರಾಳ ಕೃಷ್ಣರಾಯರು(ಅನು), 1941, ಮಗಳಿಗೆ ತಂದೆಯ ಓಲೆಗಳು, ಮಂಗಳೂರು ಗೋವಿಂದರಾಯರು, ಸಾಹಿತ್ಯ ಭಂಡಾರ ಹುಬ್ಬಳ್ಳಿ.
7. ಕಮಲೇಶ ಕೆ. ಆರ್., ಗುಡಿಸಲಿನಿಂದ ಗಂಗೋತ್ರಿಗೆ, ಶಿವರಂಜಿನಿ ಪಬ್ಲಿಕೇಷನ್ಸ್ ಮೈಸೂರು.
8. ಕಸ್ತೂರಿ ಬಾಯರಿ, 2014, ಖಲೀಲ್ ಗಿಬ್ರಾನ್ ಪ್ರೇಮ ಪತ್ರಗಳು, ಲಡಾಯಿ ಪ್ರಕಾಶನ ಗದಗ.
9. ಕುಮಾರ ವಿಜಯ ಮತ್ತು ಮಧು ಕೌಂಡಿನ್ಯ, 2007, ಲವ್‌ಲಾಲಿತ್ಯ, ಸಾಧನಾ ಪ್ರಕಾಶನ ಬೆಂಗಳೂರು.
10. ಕುವೆಂಪು, 1980, ನೆನಪಿನ ದೋಣಿಯಲ್ಲಿ ಭಾಗ.2, ಉದಯರವಿ ಪ್ರಕಾಶನ ಮೈಸೂರು.
11. ಕೃಷ್ಣಮೂರ್ತಿರಾವ್ ಎಸ್. ವಿ., 1950, ದಿಲ್ಲಿಯ ಪತ್ರಗಳು, ಉಷಾ ಸಾಹಿತ್ಯ ಮಾಲೆ ಮೈಸೂರು.
12. ಕೃಷ್ಣ ಎಸ್. ಜಿ., 2011, ಮಿತ್ರನಿಗೆ ಪತ್ರಗಳು, ಸುಮವನಮ್ ಪೆರ್ಲಂಪಾಡಿ(ದಕ್ಷಿಣ ಕನ್ನಡ).
13. ಕೃಷ್ಣ ಸಿ., 1945, ಮುಗುದೆಯರ ಪತ್ರಗಳು, ಕಾವ್ಯಾಲಯ ಮೈಸೂರು.
14. ಕೃಷ್ಣಾನಂದ ಕಾಮತ, 2014, ಪತ್ರ – ಪರಾಚಿ, ಮನೋಹರ ಗ್ರಂಥ ಮಾಲಾ ಧಾರವಾಡ.
15. ಕೊತ್ತಲವಾಡಿ ಶಿವಕುಮಾರ, 2013, ಪತ್ರ ಪರಾಗ, ವಾಸವಿ ಪಬ್ಲಿಕೇಷನ್ಸ್ ಬೆಂಗಳೂರು.
16. ಕೋ. ಚೆನ್ನಬಸಪ್ಪ, 1962, ದಕ್ಷಿಣೇಶ್ವರ ದರ್ಶನ, ತಂ. ವೆಂ. ಸ್ಮಾರಕ ಗ್ರಂಥಮಾಲೆ ಮೈಸೂರು.
17. ಕೆ. ಕೆ., 2012, ಎದುರಿಗಿರದ ನನ್ನೊಳಗಿನ ಅವಳಿಗೆ, ಅಂಚು ಪ್ರಕಾಶನ ಬೆಂಗಳೂರು.
18. ಗಣಪತಿ ಬಿ. ಡಿ., 1951, ಪತ್ರಾವಳಿ, ಕೊಡಗು ಪ್ರೆಸ್ ಮಡಿಕೇರಿ.
19. ಗಾಂಧಿ ಎಮ್ .ಕೆ., 1960, ಪತ್ರಗುಚ್ಛ–1, ಗಾಂಧೀ ಸ್ಮಾರಕ ನಿಧಿ ಕರ್ನಾಟಕ ಶಾಖೆ ಮೈಸೂರು.
20. ಗಾಂಧಿ ಎಮ್ .ಕೆ., 1960, ಪತ್ರಗುಚ್ಛ–2, ಗಾಂಧೀ ಸ್ಮಾರಕ ನಿಧಿ ಕರ್ನಾಟಕ ಶಾಖೆ ಮೈಸೂರು.
21. ಗಾಂಧಿ ಎಮ್ .ಕೆ., 1961, ಪತ್ರಗುಚ್ಛ–3, ಗಾಂಧೀ ಸ್ಮಾರಕ ನಿಧಿ ಕರ್ನಾಟಕ ಶಾಖೆ ಮೈಸೂರು.

22. ಗಾಯತ್ರೀ ನಾವಡ, 2015, ಪೇಜಾವರ ಸದಾಶಿವ ರಾವ್ ನೂರರ ನುಡಿನಮನ, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ ಉಡುಪಿ.
23. ಗುಂಡ್ಮಿ, ಚಂದ್ರಶೇಖರ ಐತಾಳ, 1972, ಬೆಳಕಿನ ಬೀಜ, ಆನಂದ ಪ್ರಕಾಶನ ಮಂಗಳೂರು.
24. ಗುರುಪಾದ ಮರಿಗುದ್ದಿ, 2006, ಪತ್ರ ಸಾಹಿತ್ಯ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.
25. ಗುರುಲಿಂಗ ಕಾಪಸೆ(ಸಂ), 1995, ಕನ್ನಡ ಕಾವಲು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.
26. ಚಂದ್ರಯ್ಯ ನಾಯ್ಡು, 2010, ದೇಜಗೌ ಪತ್ರಗಳು-ಚಿತ್ರಗಳು, ಶ್ರೀ ವೆಂಕಟೇಶ್ವರ ಪ್ರಕಾಶನ ಚಿಕ್ಕಮಗಳೂರು.
27. ಚಂದ್ರಯ್ಯ ನಾಯ್ಡು, 2010, ಸಿಪಿಕೆ ಪತ್ರಗಳು-ಚಿತ್ರಗಳು, ಶ್ರೀ ವೆಂಕಟೇಶ್ವರ ಪ್ರಕಾಶನ ಚಿಕ್ಕಮಗಳೂರು.
28. ಚಂದ್ರಯ್ಯ ನಾಯ್ಡು, 2010, ಹಾಮಾನಾ ಪತ್ರಗಳು-ಚಿತ್ರಗಳು, ಶ್ರೀ ವೆಂಕಟೇಶ್ವರ ಪ್ರಕಾಶನ ಚಿಕ್ಕಮಗಳೂರು.
29. ಚಂದ್ರಶೇಖರ್ ಎಚ್. ವಿ., 1958, ಪಯಣದ ಹಾದಿಯಿಂದ, ಸಿರಿಗನ್ನಡ ಪ್ರಕಾಶನ ಹಿರಿಯೂರು.
30. ಜಯಾ ರಾಜಶೇಖರ್ ಜಿ. ವಿ.(ಸಂ), 2015, ಪತ್ರಲೋಕ ಭಾಗ-2, ವಿಜಯಲಕ್ಷ್ಮಿ ಪ್ರಕಾಶನ ಮೈಸೂರು.
31. ದತ್ತಾತ್ರಿ, 2018, ತಾರಾಬಾಯಿಯ ಪತ್ರ, ಛಂದ ಪುಸ್ತಕ ಬೆಂಗಳೂರು.
32. ದಾನೇಶ್ವರಿ ಮಠ(ಸಂ), 2013, ಗಾಂಧೀಜಿಯವರ ಪತ್ರಗುಚ್ಛ, ಪೃಥ್ವಿ ಎಂಟರ್ ಪ್ರೈಸಸ್, ಮೈಸೂರು.
33. ದೇ. ಜವರೇಗೌಡ (ಸಂ), 1979, ತುಡಿತ ಸವಿತಾರ ಪ್ರಕಾಶನ ಮೈಸೂರು.
34. ದೇ. ಜವರೇಗೌಡ, 1991, ರಾಷ್ಟ್ರಕವಿ ಕುವೆಂಪು, ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು.
35. ನಂಜುಂಡಸ್ವಾಮಿ ಎ. ಎಸ್., 1967, ಗೌರವ ತಪಸ್ವಿ, ಸಮಾಜ ಬುಕ್ ಡಿಪೋ ಧಾರವಾಡ.
36. ನರಸಿಂಹಸ್ವಾಮಿ ಕೆ. ಎಸ್. ಮತ್ತು ರಾಮಸ್ವಾಮಿ ಎಸ್. ಆರ್.(ಅನು), 1975, ಪತ್ರಗುಚ್ಛ, ಕಾವ್ಯಾಲಯ ಪ್ರಕಾಶನ ಮೈಸೂರು.
37. ನರೇಂದ್ರ ರೈ ದೇರ್ಲ, 2015, ತೇಜಸ್ವಿ ಪತ್ರಗಳು, ಕನಸು ಪ್ರಕಾಶನ ಮಾಡಾವು ಪುತ್ತೂರು.
38. ನವರತ್ನ ಇಂದುಕುಮಾರ ಮತ್ತು ಬೆಳವಡಿ ಮಂಜುನಾಥ(ಸಂ), 2008, ಇಂದು ಪತ್ರಗಳು, ಸೌರಭ ಫ್ಲಾವರ್ಸ್, ಚಿಕ್ಕಮಗಳೂರು.
39. ನವರತ್ನರಾಮ್, 1966, ಪ್ಯಾರಿಸ್‌ನಿಂದ ಪ್ರೇಯಸಿಗೆ, ಆರತಿ ಪ್ರಕಾಶನ, ಬೆಂಗಳೂರು.
40. ನಾಗತಿಹಳ್ಳಿ ಚಂದ್ರಶೇಖರ, 2003, ನನ್ನ ಪ್ರೀತಿಯ ಹುಡುಗಿಗೆ, ಅಭಿವ್ಯಕ್ತಿ ಬೆಂಗಳೂರು.

41. ನಾಗಭೂಷಣಸ್ವಾಮಿ ಓ. ಎಲ್.(ಅನು), 2008, ಯುವಕವಿಗೆ ಬರೆದ ಪತ್ರಗಳು, ಅಭಿನವ ಬೆಂಗಳೂರು.
42. ನಾಗರಾಜ್ ಯಾದವ್ ಎ. ವಿ., ಪ್ರೇಮಧಾರೆ, ಚಿರಂತನ ಪ್ರಕಾಶನ ಅಡಕವಾಳ ಬೆಂಗಳೂರು ಗ್ರಾಮಾಂತರ ಜಿಲ್ಲೆ.
43. ನಾಗೇಶ್ ಜೆ. ನಾಯಕ, ಈ ಹೃದಯ ಹಾಡಿದೆ, ಕಿಕ್ಕೇರಿ ಪಬ್ಲಿಕೇಷನ್ಸ್ ಬೆಂಗಳೂರು.
44. ನಾಗೇಶರಾವ್ ಎಲ್. ಜಿ., 2010, ಇತಿ ನಿನ್ನ ಪ್ರೀತಿಯ ಅಪ್ಪ, ಸಾಹಿತ್ಯ ಸಿಂಧು ಪ್ರಕಾಶನ ಬೆಂಗಳೂರು.
45. ನಾಡಿಗ ಕೃಷ್ಣಮೂರ್ತಿ(ಸಂ), 1950, ನಮ್ಮ ಕಾಗದಗಳು, ಗೀತಾ ಸಾಹಿತ್ಯ ಮಂದಿರ ಮಲ್ಲೇಶ್ವರಂ.
46. ನಾವಡ ಎ. ವಿ.(ಸಂ), 1999, ದಾಸವಾಙ್ಮಯ, ಕು. ಶಿ. ಅಭಿನಂದನ ಸಮಿತಿ ಉಡುಪಿ.
47. ನಿರಂಜನ, 1957, ಪುಷ್ಪಹಾರ, ಯು. ಆರ್. ಶೆಣೈ ಎಂಡ್ ಸನ್ಸ್, ಮಂಗಳೂರು.
48. ಪದ್ಮಾ ಕೃಷ್ಣಮೂರ್ತಿ, 2012, ಪಂಜು, ಪುಣ್ಯ ಪ್ರಕಾಶನ, ಬೆಂಗಳೂರು.
49. ಪರಮೇಶ್ವರಯ್ಯ ವೈ. ಎಂ., 2013, ಪ್ರತಿಷ್ಠಿತರ ಪತ್ರಗಳು, ಶಾಲಿನಿ ಪಬ್ಲಿಕೇಷನ್ ಮಲ್ಲತ್ತಹಳ್ಳಿ(ಬೆಂ)
50. ಪೂರ್ಣಿಮಾ ಭಟ್ ಕೆ., 1999, ಅಲಕಾಗೆ ಅಜ್ಜಿಯ ಪತ್ರಗಳು, ನವಕರ್ನಾಟಕ ಪ್ರಕಾಶನ ಬೆಂಗಳೂರು.
51. ಪೃಥ್ವಿರಾಜ್ ಕವತರ್, 2013, ಪತ್ರ ವಾತ್ಸಲ್ಯ, ಅಭಿನವ ವಿಜಯನಗರ ಬೆಂಗಳೂರು.
52. ಪ್ರಣತಾರ್ತಿಹರನ್ ಬಿ. ಎಸ್., 2004, ಸಂಕೇತಿ: ಶತಮಾನದ ಪತ್ರಗಳು, ಸಮುದಾಯ ಆರೋಗ್ಯ ಕೇಂದ್ರ ಮೈಸೂರು.
53. ಬಬಲೇಶ್ವರ, 2004, ಶ್ರೀ ಅರವಿಂದರ ಪತ್ರಗಳು, ಶ್ರೀ ಅರವಿಂದಾಶ್ರಮ ಪಾಂಡಿಚೇರಿ.
54. ಬಸವರಾಜ ಕಟ್ಟೀಮನಿ, 1981, ಕಾದಂಬರಿಕಾರನ ಕಥೆ, ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು
55. ಬಸವರಾಜ ಚಿಕ್ಕನರಗುಂದ(ಲೇ), 2015, ಪತ್ರ ಸ್ಪಂದನ, ವಿದ್ಯಾನಗರ ಹುಬ್ಬಳ್ಳಿ.
56. ಬಸವರಾಜು ಡೋಣೂರು, 2014, ಪತ್ರಾವಲಿ, ರೋಹಿಣಿ ಎಂಟರ್‌ಪ್ರೈಸಸ್ ಬೆಂಗಳೂರು.
57. ಬಾಲಚಂದ್ರ ಜಯಶೆಟ್ಟಿ, 2018, ಪೂರ್ವೋತ್ತರ ಪರಿಣಯ, ಬಸವ ಪ್ರಕಾಶನ ಕಲಬುರಗಿ.
58. ಬೀಚಿ, 1965, ಬೆಳ್ಳಿ ಪತ್ರಗಳು, ಕರುಣಾಕರನ್ ಪ್ರಕಾಶನ ಹೊಸಕೇರಿ.
59. ಬೇಲೂರು ರಾಮಮೂರ್ತಿ, 1999, ಮಹಾಕವಿ ಮುದ್ದಣ, ಸಪ್ನ ಬುಕ್ ಹೌಸ್ ಬೆಂಗಳೂರು.
60. ಬೋಳಂತಕೋಡಿ ಈಶ್ವರಭಟ್ಟ, 2001, ನೆನಪಿನಂಗಳದಲ್ಲಿ ಹಾ. ಮಾ. ನಾ. (ಸಂ), ಕರ್ನಾಟಕ ಸಂಘ ಪುತ್ತೂರು, ದ. ಕ.

61. ಭಟ್ ಎಂ. ವಿ., 2012, ಸಂಪಾದಕರಿಗೆ ಪತ್ರಗಳು, ಯುಗಪುರುಷ ಪ್ರಕಟನಾಲಯ, ಕಿನ್ನಿಗೋಳಿ (ದಕ್ಷಿಣ ಕನ್ನಡ).

62. ಮಣಿಪಾಲ ಸಾಹಿತ್ಯ ಸಂಘ, 1998, ಕೃತಿ–ಆಕೃತಿ, ಮಣಿಪಾಲ.

63. ಮತೀನ್ ತಾರೀಕ್ ಬಾಗ್ವತಿ, 2009, ಪ್ರೀತಿಯ ಮಗಳಿಗೆ, ಶಾಂತಿ ಪ್ರಕಾಶನ ಮಂಗಳೂರು.

64. ಮಲ್ಲಿಕಾರ್ಜುನ ಬನ್ನಿ, 2016, ವಿಮರ್ಶಾ ಪತ್ರಗಳು, ಶಕ್ತಿ ಪ್ರಿಂಟರ್ಸ್ & ಪಬ್ಲಿಷರ್ಸ್ ಬೆಂಗಳೂರು.

65. ಮಹಾತ್ಮ ಗಾಂಧೀ ಮೆಮೋರಿಯಲ್ ಕಾಲೇಜು, 1970, ಅಭಿವಂದನ, ಉಡುಪಿ.

66. ಮಾಸ್ತಿವೆಂಕಟೇಶ ಅಯ್ಯಂಗಾರ್, 1977, ಪತ್ರಗಳು, ಪುರೋಗಾಮಿ ಸಾಹಿತ್ಯ ಸಂಘ ಮಲ್ಲೇಶ್ವರಂ.

67. ಮಾಸ್ತಿ ವೆಂಕಟೇಶ ಅಯ್ಯಂಗಾರ್, 1967, ಸಾಹಿತ್ಯ ಲಾಲನೆ, ಪ್ರಧಾನ ಪ್ರಿಂಟರ್ಸ್ ಬೆಂಗಳೂರು.

68. ಮುದಾಳೆ ಎಂ. ಪಿ., 2010, ಪ್ರೀತಿಯೇ ನನ್ನುಸಿರು, ಕರ್ನಾಟಕ ಜನಸೇವಾ ಗ್ರಾಮೀಣ ಅಭಿವೃದ್ಧಿ ಸಂಸ್ಥೆ (ರಿ), ಬೀದರ.

69. ಮೂಡ್ನಾಕೂಡು ಚಿನ್ನಸ್ವಾಮಿ, 2005, ಓಲೆ ಒಕ್ಕಣೆ, ಸಂವಹನ ಮೈಸೂರು.

70. ಮೂರ್ತಿರಾವ್ ಎ. ಎನ್., 1983, ಚಿತ್ರಗಳು–ಪತ್ರಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನೃಪತುಂಗ ರಸ್ತೆ ಬೆಂಗಳೂರು.

71. ಮೋಹನ್ ಜಿ. ಎನ್. (ಸಂ), (1995), ಎಕ್ಕುಂಡಿ ನಮನ, ಕರ್ನಾಟಕ ಸಂಘ ಪುತ್ತೂರು.

72. ರಂಗಸ್ವಾಮಿ ಡಿ. ಟಿ., ಪತ್ರ ಲೇಖನ ಕಲೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

73. ರಂಗಸ್ವಾಮಿ ವಿ.(ಅನು), 2006, ಡಾ. ಬಿ. ಆರ್. ಅಂಬೇಡ್ಕರ್ ಪತ್ರಗಳು, ಲಕ್ಷ್ಮೀ ಸ್ಮಾರಕ ಪ್ರಕಾಶನ ಬೆಂಗಳೂರು.

74. ರತ್ನಮ್ಮನವರು ಹೆಗ್ಗಡೆ, 1948, ಮಗಳಿಗೊಂದು ಪತ್ರ, ಶ್ರೀ ಧ.ಮ. ಪುಸ್ತಕಮಾಲೆ, ಉಜಿರೆ(ದ.ಕ).

75. ರವಿಕುಮಾರ ನ.(ಸಂ), 2008, ದೇವರ ಗೊಡವೆ ಕೂಡ ನನಗೆ ಬೇಡ, ಅಭಿನವ ಬೆಂಗಳೂರು.

76. ರಾಗಂ, 2013, ಇಂತಿ ನಿನ್ನ ಬಾಪು, ಕನ್ವ ಪ್ರಕಾಶನ ಬೆಂಗಳೂರು.

77. ರಾಜರತ್ನಂ ಜಿ. ಪಿ.(ಸಂ), 1948, ಕೈಲಾಸಂ ನೆನಪು, ಹಿಂದ್ ಕೀತಾಬ್ಸ್ ಲಿಮಿಟೆಡ್ (ಬೊಂಬಾಯಿ) ಶೇಷಾದ್ರಿಪುರ ಬೆಂಗಳೂರು.

78. ರಾಜರತ್ನಂ ಜಿ. ಪಿ.(ಸಂ), 2012, ಕೈಲಾಸಂ ನೆನಪು ಮತ್ತು ಕೈಲಾಸಂ ಕಥನ, ಸಪ್ನ ಬುಕ್ ಹೌಸ್ ಬೆಂಗಳೂರು.

79. ರಾಜರತ್ನಂ ಜಿ. ಪಿ.(ಸಂ), 1971, ಮಂಜೇಶ್ವರದ ಶ್ರೀ ಎಂ. ಗೋವಿಂದಪೈ ಅವರ ಕೆಲವು ಪತ್ರಗಳು, ವಿದೇಹ ಮಲ್ಲೇಶ್ವರಂ ಬೆಂಗಳೂರು.

80. ರಾಜೇಶ್ವರಿ ತೇಜಸ್ವಿ, 2011, ನನ್ನ ತೇಜಸ್ವಿ, ಪುಸ್ತಕ ಪ್ರಕಾಶನ, ಸರಸ್ವತಿಪುರಂ, ಮೈಸೂರು.

81. ರಾಮಚಂದ್ರ ಎಂ., 1991, ಪತ್ರಾವಳಿ, ಗೀತಾ ಬುಕ್ ಹೌಸ್ ಮೈಸೂರು.
82. ರಾಮದೇವ ಶೆಣೈ ಆರ್.(ಸಂ), 1965, ದೀವಿಗೆ ಭಾಗ. 1, ಎಂ. ಗೋವಿಂದ ಪೈ ಸ್ಮಾರಕ ನಿಧಿ ಭಂಡಾರಕರ್ಸ್ ಕಾಲೇಜು ಕುಂದಾಪುರ.
83. ರಾಮನಾಥ ಭಟ್ ಜಿ., 2011, ಗುರುದೇವ ಮತ್ತು ಮಹಾತ್ಮ, ನವಕರ್ನಾಟಕ ಪಬ್ಲಿಕೇಷನ್ ಪ್ರೈವೆಟ್ ಲಿಮಿಟೆಡ್ ಬೆಂಗಳೂರು.
84. ಲಲಿತಾಂಬ ವೃಷಭೇಂದ್ರಸ್ವಾಮಿ, 1998, ಪುಟ್ಟನಿಗೆ ಹಿತೈಷಿಯ ಪತ್ರಗಳು, ಪ್ರಸಾದ ಪ್ರಕಾಶನ ಧಾರವಾಡ.
85. ವಲಿ ಆರ್. ಹಿರಿಯೂರು, 2018, ಅಮೃತ ಪತ್ರಗಳು, ಗೋಮಿನಿ ಪ್ರಕಾಶನ ತುಮಕೂರು.
86. ವಾದಿರಾಜ ದೇಶಪಾಂಡೆ, 2010, ಮನದರಸಿ ಮಾನಸಿ, ಸಿಂಧು ಸಾಹಿತ್ಯ ಮೈಸೂರು.
87. ವಾರಿಜಾಕ್ಷಿ ಶೆಟ್ಟಿ ವಿ., ನೊಂದ ತಂಗಿಗೆ ಅಣ್ಣನ ಹಿತವಚನ, ಹಿಂದೂ ಧರ್ಮ ಪ್ರಕಾಶನ ಅಡ್ಕತ್ತಬೈಲು ಕೇರಳ.
88. ವಿಜಯಕುಮಾರ ಭಂಡಾರಿ ಹೆಬ್ಬಾರ ಬೈಲು, 2002, ಅಪ್ಪೆಗೆ ಬಲೆದ ಓಲೆ (ತುಳು ಪತ್ರಗಳ ಗುಚ್ಛ), ಬಂಟ್ವಾಳ ತಾಲ್ಲೂಕ ತುಳು ಸಾಹಿತ್ಯ ಪರಿಷದ್ ವಿಟ್ಲ.
89. ವಿಜಯನಳಿನಿ (ಸಂ), 2016, ನೆನೆವೆನಂದಿನ ಬಾಳಚಿತ್ರಣವ, ಅಕ್ಷರ ಪ್ರಕಾಶನ ಹೆಗ್ಗೋಡು.
90. ವಿಜಯನಾಥ ಶೆಣೈ, 2014, ಪತ್ರಾವಳಿ, ಚಿಥಾ ಪಬ್ಲಿಕೇಷನ್ಸ್, ಮಂಗಳೂರು.
91. ವಿಜಯನಾಥ ಶೆಣೈ, 2015, ಪತ್ರ ಸಂವಾದ, ಅಭಿನವ ವಿಜಯನಗರ ಬೆಂಗಳೂರು.
92. ವಿಜಯಾ ಹಾಗು ಇತರರು(ಸಂ), 1999, ಅಕ್ಕರೆ, ಗೀತಾ ಬುಕ್ ಹೌಸ್ ಮೈಸೂರು
93. ವಿಶ್ವೇಶ್ವರಯ್ಯ ಹೆಚ್. ಎಸ್. ಕೆ., 2001, ಕನ್ನಡ ವ್ಯಾಕರಣ, ವಾಸನ್ ಬುಕ್ ಡಿಪೋ ಬೆಂಗಳೂರು.
94. ವೆಂಕಟೇಶ ಮೂರ್ತಿ ಎಚ್. ಎಸ್., 2012, ಮರೆಯುವ ಮೊದಲು, ಸಪ್ನ ಬುಕ್ ಹೌಸ್ ಬೆಂಗಳೂರು.
95. ವೆಂಕಟೇಶ ಮೂರ್ತಿ ಎಚ್. ಎಸ್. ಹಾಗೂ ನಾಗಭೂಷಣ ತೀ. ಶ್ರೀ.(ಸಂ), 2013, ಪರಸ್ಪರ, ಡಾ॥ ಪು. ತಿ. ನ. ಟ್ರಸ್ಟ್(ರಿ) ಬೆಂಗಳೂರು.
96. ವೆಂಕೋಬಾಚಾರ್ಯ ಪಿ., 1953, ಮೋಪಾಸನ ಓಲೆಗಳು, ಆನಂದ ಗ್ರಂಥಮಾಲಾ ಹುಬ್ಬಳ್ಳಿ.
97. ಶಾಂತಾದೇವಿ ಹಿರೇಮಠ, 2015, ಮಗಳೆ ಮಗಳೆ, ಕುಕ್ಕೆಶ್ರೀ ಪ್ರಕಾಶನ ಬೆಂಗಳೂರು.
98. ಶಾಸ್ತ್ರೀ ಲ. ನ., 1988, ನನ್ನ ಅಳಸಿಂಗ ನಿನ್ನ ವಿವೇಕಾನಂದ, ಹಿರೇಮಗಳೂರು ಕಣ್ಣನ್ ಸಾಕೇತ ನಿಲಯ.

99. ಶೂದ್ರ ಶ್ರೀನಿವಾಸ ಜಿ., 1985, ಕನಸಿಗೊಂದು ಕಣ್ಣು, ಶೂದ್ರ ಬೆಂಗಳೂರು.

100.ಶಿವಗೊಂಡ ಎಂ. ಬಿ., 2014, ಅಕ್ಕನ ಅಕ್ಕರೆಯ ಓಲೆಗಳು, ಜನಪ್ರಿಯ ಪ್ರಕಾಶನ ಬೀದರ.

101. ಶಿವರಾಮಕಾರಂತ ಕೆ., 1998, ಪತ್ರ ವ್ಯವಹಾರ ಮತ್ತು ನಾನು, ಡಾ. ಕೆ. ಶಿವರಾಮಕಾರಂತ ಪೀಠ ಮಂಗಳೂರು ವಿಶ್ವವಿದ್ಯಾನಿಲಯ ಮಂಗಳಗಂಗೋತ್ರಿ.

102.ಶಿವಾನಂದರಾವ್ ಬಿ. ಪಿ., 2015, ಮಧುಸಂಚಯ, ಪಾಂಚಜನ್ಯ ಪಬ್ಲಿಕೇಷನ್ಸ್ ಬೆಂಗಳೂರು.

103.ಶ್ರೀನಿವಾಸ ಹಾವನೂರು, 1987, ಪತ್ರಗಳು ಚಿತ್ರಿಸಿದ ಗೋವಿಂದ ಪೈ, ವಿನಯ ಪ್ರಕಾಶನ ಬೆಂಗಳೂರು.

104.ಶ್ರೀರಾಮಕೃಷ್ಣ ಆಶ್ರಮ, 1950, ಸ್ವಾಮಿ ವಿವೇಕಾನಂದರ ಪತ್ರ ಮಾಲೆ, ಮೈಸೂರು.

105.ಶ್ರೀವಳ್ಳಿ ಟಿ. ಎಸ್, 2013, ಗಿರಿಬಾಲೆ – ಅಕ್ಕನ ಓಲೆಗಳು, ನವರಸ ನಾಟ್ಯಾಲಯ ಮೈಸೂರು.

106.ಸಂಗಮೇಶ ತಮ್ಮನಗೌಡ್ರ, 2007, ಮೌನಬಿಚ್ಚಿದ ಮಾತು, ನೀಲಾ ಪ್ರಕಾಶನ ಗುಜಮಾಗಡಿ.

107.ಸಂತೋಷ ಬಾಗಿಲಗದ್ದೆ, 2013, ನೀನೇ ಉಸಿರು ನನ್ನೊಲವೆ, ಫಾಲ್ಗುಣಿ ಪುಸ್ತಕ ಮಲ್ಲೇಶ್ವರಂ.

108.ಸದಾಶಿವಯ್ಯ ಕೆ. ಎಸ್., 1980, ಉಪಕುಲಪತಿಗಳಿಗೆ ಪತ್ರಗಳು, ವಿಶ್ವನಾಥ ಪ್ರಕಾಶನ ಮೈಸೂರು.

109.ಸರಿತಾ ಕುಸುಮಾಕರ ದೇಸಾಯಿ(ಸಂ), 1998, ಅನುಪಮ–ಸ್ನೇಹ, ಹಂಸ ಧ್ವನಿ ಪ್ರಕಾಶನ ಬೆಂಗಳೂರು.

110. ಸಿಂಪಿ ಲಿಂಗಣ್ಣ, 1950, ಸ್ವರ್ಗದೋಲೆಗಳು, ಮಿಂಚಿನಬಳ್ಳಿ ಕಾರ್ಯಾಲಯ ಧಾರವಾಡ.

111. ಸಿದ್ಧವನಹಳ್ಳಿ ಕೃಷ್ಣ ಶರ್ಮರು(ಸಂ), 1952, ಗಾಂಧೀಜಿಯವರ ರಾಜಕೀಯ ಪತ್ರಗಳು, ಮಿಂಚಿನ ಚಾವಡಿ ಧಾರವಾಡ.

112. ಸೀತಾರಾಮಯ್ಯ ಎಂ. ವಿ., ಮತ್ತು ಆರ್. ಶೇಷಶಾಸ್ತ್ರಿ, 1982, ಮಣಿಹ, ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಬೆಂಗಳೂರು.

113. ಸೀಮಂತಿನಿ ಮತ್ತು ತೇಜಸ್ವಿನಿ ನಿರಂಜನ, 1994, ನಾಡಿ: ನಿರಂಜನರ ಆಯ್ದ ಪತ್ರಗಳು, ಕರ್ನಾಟಕ ಸಂಘ ಪುತ್ತೂರು.

114. ಸುಜಾತಾ. ಎಚ್. ಎಸ್., 2007, ಅಶ್ವತ್ಥರ ಬದುಕು: ಒಂದು ನೋಟ, ಸುಹಾಸ ಪ್ರಕಟನೆಗಳು ಮೈಸೂರು.

115. ಸುದರ್ಶನ ದೇಸಾಯಿ, ಮೃತ್ಯುವಿಗೆ ಮುತ್ತಿಟ್ಟವರು, 1995, ಗಿರೀಶ ಎಂಟರ್‌ಪ್ರೈಸಸ್ ಬೆಂಗಳೂರು.

116. ಸುಮತೀಂದ್ರ ನಾಡಿಗ, 2012, ಗೋಪಾಲಕೃಷ್ಣ ಅಡಿಗರ ಪತ್ರಗಳು, ಸಪ್ನ ಬುಕ್ ಹೌಸ್ ಬೆಂಗಳೂರು.

117. ಸುಮತೀಂದ್ರ ನಾಡಿಗ, 2009, ಮೂರು ಸಾಹಿತ್ಯ ಚರಿತ್ರೆಗಳು, ಸಪ್ನ ಬುಕ್ ಹೌಸ್ ಬೆಂಗಳೂರು.

118. ಹರಿಹರ ಪ್ರಿಯ, 1974, ಕುವೆಂಪು ಪತ್ರಗಳು, ಬಯಲು ಸೀಮೆ ಪ್ರಕಾಶನ, ಮಂದಗೆರೆ.

119. ಹರಿಹರ ಪ್ರಿಯ, 2013, ಕುವೆಂಪು ಪತ್ರಗಳು, ಆಕೃತಿ ಪುಸ್ತಕ ರಾಜಾಜಿನಗರ ಬೆಂಗಳೂರು.

120. ಹರಿಹರ ಪ್ರಿಯ, 2013, ಚದುರಂಗರ ಪತ್ರಗಳು, ಆಕೃತಿ ಪುಸ್ತಕ ರಾಜಾಜಿನಗರ ಬೆಂಗಳೂರು.

121. ಹರಿಹರ ಪ್ರಿಯ, 2013, ಬನ್ನಂಜೆ ಗೋವಿಂದಾಚಾರ್ಯರ ಪತ್ರಗಳು, ಆಕೃತಿ ಪುಸ್ತಕ ರಾಜಾಜಿನಗರ ಬೆಂಗಳೂರು.

122. ಹಸನ್ ನಯೀಂ ಸುರಕೋಡ (ಕನ್ನಡ ಭಾಷಾಂತರ), 2013, ಸ್ಯಾಮ್ ಅಂಕಲ್‌ಗೆ ಪತ್ರಗಳು ಮತ್ತು ಇತರ ಕಿಡಿಗೇಡಿ ಬರಹಗಳು, ಚಿಂತನ ಪುಸ್ತಕ ಬೆಂಗಳೂರು.

123. ಹಳಕಟ್ಟಿ ಬಿ. ಜಿ.(ಅನು), 2007, ಮಾತನಾಡುವ ದಾಖಲೆಗಳು, ಪ್ರಸನ್ನ ಪ್ರಕಾಶನ ಧಾರವಾಡ.

124. ಹೆಗಡೆ ಎಂ. ಜಿ. (ಸಂ), 2008, ಸಹಯಾನ, ಚಿಂತನ ಪುಸ್ತಕ ಬೆಂಗಳೂರು.

125. ಹೇಮಾವತಿ ವೀ. ಹೆಗ್ಗಡೆ, 2013, ಮಗಳಿಗೊಂದು ಪತ್ರ, ಜನತಾ ಶಿಕ್ಷಣ ಸಮಿತಿ ಧಾರವಾಡ.

126. ಹೊಯ್ಸಳ (ಅನು), 1948, ಮಗಳಿಗೆ ತಂದೆಯ ಓಲೆಗಳು, ಮಂಗಳೂರು ಗೋವಿಂದರಾಯರು, ಸಾಹಿತ್ಯ ಭಂಡಾರ ಹುಬ್ಬಳ್ಳಿ.

ಪರಾಮರ್ಶನ ಗ್ರಂಥಗಳು

1. ಅನುಪಮಾ ಅಭಿನಂದನ–ಕರ್ನಾಟಕ ಸಂಘ, 1988, ಪುತ್ತೂರು(ದಕ್ಷಿಣ ಕನ್ನಡ)
2. ಅಪ್ಪಗೆರೆ ಡಿ. ಸೋಮಶೇಖರ(ಸಂ), 2003, ನೋವು ಹೆತ್ತ ಪ್ರೀತಿ, ಶ್ರೀ ಕ್ಷೇತ್ರ ಪ್ರಕಾಶನ ಮೈಸೂರು
3. ಅಬ್ದುಲ್ ಬಷೀರ್ ಜಿ., 2019, ವ್ಯವಹಾರಿಕ ಕನ್ನಡ ಮಾತು ಮತ್ತು ಬರೆಹ, ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು.
4. ಆರ್.ಜಿ.ಡಿ. (ಸಂ), 2015, ತೇಜಸ್ವಿಯನ್ನು ಹುಡುಕುತ್ತಾ..., ಸಪ್ನ ಬುಕ್ ಹೌಸ್ ಬೆಂಗಳೂರು.
5. ಉಪಾಧ್ಯ ಜಿ. ಎನ್., 2005, ಬಿ. ಎ. ಸನದಿ ಬದುಕು–ಬರಹ, ಪುಟ. 96, ಕರ್ನಾಟಕ ಸಂಘ ಮುಂಬೈ.
6. ಕಡಿದಾಳು ಶಾಮಣ್ಣ, 2009, ಆ ದಶಕ, ಅಹರ್ನಿಸಿ ಪ್ರಕಾಶನ ಶಿವಮೊಗ್ಗ.
7. ಕನ್ನಡ ರತ್ನಕೋಶ, ಕನ್ನಡ ಸಾಹಿತ್ಯ ಪರಿಷತ್ತು, 1977, ಬೆಂಗಳೂರು.
8. ಕನ್ನಡ ಸಾಹಿತ್ಯ ಪರಿಷತ್ತು, 1951, ಚಂದ್ರಹಾಸೋಪಾಖ್ಯಾನ, ಬೆಂಗಳೂರು.
9. ಕರ್ನಾಟಕ ಸಂಘ ಪುತ್ತೂರು, ಅನುಪಮಾ ಅಭಿನಂದನ, 1988, ಪುತ್ತೂರು.

10. ಕಲಬುರ್ಗಿ ಎಂ. ಎಂ., ಕನ್ನಡ ಸಂಶೋಧನಶಾಸ್ತ್ರ, 1992, ಸಪ್ನ ಬುಕ್ ಹೌಸ್ ಬೆಂಗಳೂರು.
11. ಕಾಕೋಳು ಸರೋಜಾರಾವ್, 1994, ಹೆಳವನಕಟ್ಟೆ ಗಿರಿಯಮ್ಮ, ಚಂದ್ರಿಕಾ ಪ್ರಕಾಶನ ಮಲ್ಲೇಶ್ವರಂ ಬೆಂಗಳೂರು.
12. ಕಾಳೇಗೌಡ ನಾಗವಾರ (ಸಂ), 1997, ಶಾಂತವೇರಿ ಗೋಪಾಲಗೌಡ, ಪುಟ. 239, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.
13. ಕೇಶವಭಟ್ಟ ಟಿ., 2017, ಶಿವಕೋಟ್ಯಾಚಾರ್ಯರ ವಡ್ಡಾರಾಧನೆ, ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು.
14. ಗಣೇಶ ಕೆ. ಆರ್. (ಸಂ), 2004, ಕಮ್ಮಟಿಗ, ಕೃಷ್ಣಾನಂದ ಕಾಮತ ಪ್ರತಿಷ್ಠಾನ ಹೊನ್ನಾವರ
15. ಗೋಪಾಲ ಟಿ. ಎಸ್., 1997, ಕನ್ನಡ ವ್ಯಾಕರಣ ಪ್ರವೇಶ, ಭಾರತಿ ಪ್ರಕಾಶನ ಮೈಸೂರು.
16. ಚಿದಾನಂದ ಮೂರ್ತಿ ಎಂ., 2011, ಸಂಶೋಧನೆ: ಪಾಂಡಿತ್ಯ ರಸ, ಪ್ರಿಯದರ್ಶಿನಿ ಪ್ರಕಾಶನ ಬೆಂಗಳೂರು.
17. ಜಯರಾಮ ಕಾರಂತ ಮತ್ತು ನಂದಳಿಕೆ ಬಾಲಚಂದ್ರ ರಾವ್, 1996, ಮುದ್ದಣ ನಮನ, ಕರ್ನಾಟಕ ಸಂಘ ಪುತ್ತೂರು.
18. ಜಯಂತ ಕಾಯ್ಕಿಣಿ, 2001, ಬೊಗಸೆಯಲ್ಲಿ ಮಳೆ, ಅಂಕಿತ ಪುಸ್ತಕ ಬೆಂಗಳೂರು.
19. ತಿಪ್ಪೇರುದ್ರಸ್ವಾಮಿ ಎಚ್., 1997, ಸಹೃದಯಿ, ಅಧ್ಯಕ್ಷರು ಶ್ರೀ ಅನ್ನದಾನ ವಿಜಯ ವಿದ್ಯಾಪ್ರಸಾರಕ ಸಮಿತಿ ನರೇಗಲ್(ಗದಗ)
20. ದಂಡಪ್ಪ ಎಚ್. (ಸಂ), 2001, ಬಡವರ ನಗುವಿನ ಶಕ್ತಿ, ಅಂಕಿತ ಪುಸ್ತಕ ಬೆಂಗಳೂರು.
21. ದೇ. ಜವರೇಗೌಡ, 1967, ತೀನಂಶ್ರೀ(ಜೀವನ ಚರಿತ್ರೆ), ಪುಟ. 39, ಕನ್ನಡ ಸಂಘ ಮೈಸೂರು.
22. ನಾಗಭೂಷಣ ಡಿ. ಎಸ್., 2001, ಹಣತೆ, ಲೋಹಿಯಾ ಪ್ರಕಾಶನ ಬಳ್ಳಾರಿ.
23. ನಾರಾಯಣ್ ಪಿ. ವಿ., 2001, ಇಷಾಂಶು(ಡಾ. ಸಾಶಿಮ ಗೌರವ ಗ್ರಂಥ), ಡಾ. ಸಾ. ಶಿ. ಮರಳಯ್ಯ ಅಭಿನಂದನ ಸಮಿತಿ ಬೆಂಗಳೂರು.
24. ಪಂಜೆ ಶತಮಾನೋತ್ಸವ ಸಮಿತಿ, 1974, ತೆಂಕಣ ಗಾಳಿ (ಪಂಜೆ ಶತಮಾನೋತ್ಸವ ಸಂಸ್ಮರಣ ಸಂಚಿಕೆ), ಮಂಗಳೂರು.
25. ಪರಮೇಶ್ವರಭಟ್ಟ ಎಸ್. ವಿ., 1996, ರಸಋಷಿ ಕುವೆಂಪು(ಸಂಪುಟ: 3), ಪ್ರಸಾರಾಂಗ ಮೈಸೂರು ವಿಶ್ವವಿದ್ಯಾನಿಲಯ ಮಾನಸಗಂಗೋತ್ರಿ.
26. ಪಾ. ವೆಂ. ಆಚಾರ್ಯ, 1991, ಪದಾರ್ಥ ಚಿಂತಾಮಣಿ, ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೆಟ್ ಲಿಮಿಟೆಡ್ ಬೆಂಗಳೂರು.
27. ಪಾಟೀಲ ಎ. ಟಿ., 2007, ಅಂಚೆ ಚೀಟಿಗಳಲ್ಲಿ ಆರೋಗ್ಯ, ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು.

28. ಪುಟ್ಟಸ್ವಾಮಿ ಡಿ. ಹಾಗೂ ಟಿ. ಕೆ. ಪಾಟೀಲ (ಸಂ), ಮಿರ್ಜಿ ಅಣ್ಣಾರಾಯ, ವಿವೇಕಾಭ್ಯುದಯ ಕಾರ್ಯಾಲಯ, ಮಂಗಳೂರು.
29. ಬಸವರಾಜ ಕಟ್ಟೀಮನಿ, 1981, ಕಾದಂಬರಿಕಾರನ ಕಥೆ, ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು
30. ಬಸವರಾಜು ಜಿ. ಪಿ., 1988, ರಾಜ ಮತ್ತು ಹಕ್ಕಿ, ಪರಿಸರ ಸಾಹಿತ್ಯ ಪ್ರಕಾಶನ ಶಿವಮೊಗ್ಗ.
31. ಬಸವಾ ಕೆ. ಡಿ., 2012, ವ್ಯವಹಾರ ಸಂಪರ್ಕ – ಸಂದೇಶ, ಸಾಹಿತ್ಯ ಪ್ರಕಾಶನ ಹುಬ್ಬಳ್ಳಿ
32. ಬಾಗಲೋಡಿ ದೇವರಾಯ, 1986, ರುದ್ರಪ್ಪನ ರೌದ್ರ ಮತ್ತು ಇತರ ಕತೆಗಳು, ಮನೋಹರ ಗ್ರಂಥಮಾಲೆ ಧಾರವಾಡ.
33. ಭರತಕುಮಾರ್ ಪೊಲಿಪು(ಸಂ), 2012, ನಿಜದ ನಿಲುವು, ಕನ್ನಡ ಸಾಹಿತ್ಯ ಪರಿಷತ್ತು, ಮಹಾರಾಷ್ಟ್ರ ಘಟಕ ಮುಂಬೈ
34. ಮಾಲಿನ ಮಲ್ಯ ಬಿ., 1987, ನಾನು ಕಂಡ ಕಾರಂತರು, ಅಕ್ಷರ ಪ್ರಕಾಶನ ಹೆಗ್ಗೋಡು(ಸಾಗರ),
35. ಮಾಸ್ತಿ ವೆಂಕಟೇಶ ಅಯ್ಯಂಗಾರ್, 1976, ನವರತ್ನ ರಾಮರಾವ್, ಜೀವನ ಕಾರ್ಯಾಲಯ ಬೆಂಗಳೂರು
36. ಮುರಳೀಧರ ಉಪಾಧ್ಯ ಹಿರಿಯಡಕ, 2000, ಯು. ಆರ್. ಅನಂತಮೂರ್ತಿ(ಜೀವನ ಹಾಗೂ ಕೃತಿಗಳ ಸಮೂಹಶೋಧ) ಪುಟ. 42, ಕರ್ನಾಟಕ ಸಂಘ ಪುತ್ತೂರು.
37. ಮೋಹನ್ ಜಿ. ಎನ್. (ಸಂ), (1995), ಎಕ್ಕುಂಡಿ ನಮನ, ಪುಟ. 200, ಕರ್ನಾಟಕ ಸಂಘ ಪುತ್ತೂರು.
38. ರಾಘವೇಂದ್ರ ತೊಗರ್ಸಿ ಕೆ., 2006, ಸಮೂಹ ಸಂವಹನ ಕನ್ನಡ, ಆವಿ ಪುಸ್ತಕ ಮನೆ ಬೆಂಗಳೂರು.
39. ರಾಮಚಂದ್ರನ್ ಸಿ. ಎನ್.(ಅನು), 1999, ತ್ರಿವೇಣಿ, ಸಾಹಿತ್ಯ ಅಕಾದೆಮಿ ನವದೆಹಲಿ.
40. ರಾಮನಾಥ್ ಎನ್.(ಸಂ), ಬನಸಿರಿ, 2017, ತೇಜು ಪಬ್ಲಿಕೇಷನ್ಸ್ ಬೆಂಗಳೂರು.
41. ವಿಜಯಾ ಹಾಗೂ ಇತರರು (ಸಂ), 1999, ಅಕ್ಕರೆ (ವ್ಯಾಸರಾಯ ಬಲ್ಲಾಳ ಅಭಿನಂದನಾ ಗ್ರಂಥ), ಗೀತಾ ಬುಕ್ ಹೌಸ್ ಮೈಸೂರು.
42. ವೆಂಕಟರಮಣನ್ ಡಿ. ಆರ್., 2008, ವಿರಕ್ತ ರಾಷ್ಟ್ರಕವಿ ಡಿವಿಜಿ, ನವಕರ್ನಾಟಕ ಪ್ರಕಾಶನ ಬೆಂಗಳೂರು.
43. ವೆಂಕಟಸುಬ್ಬಯ್ಯ ಜಿ., 1996, ಇಗೋ ಕನ್ನಡ, ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೆಟ್ ಲಿಮಿಟೆಡ್ ಬೆಂಗಳೂರು.

44. ವೆಂಕಟಸುಬ್ಬಯ್ಯ ಜಿ., 2006, ಕನ್ನಡ ಕ್ಲಿಷ್ಟಪದ ಕೋಶ, ಪ್ರಿಸಮ್ ಬುಕ್ಸ್ ಪ್ರೈ.ಲಿ ಬೆಂಗಳೂರು.
45. ವೆಂಕಟೇಶಮೂರ್ತಿ ಎಚ್. ಎಸ್., ಚಿ. ಶ್ರೀನಿವಾಸರಾಜು (ಸಂ), (1991), ಸೌಜನ್ಯ, ಸುವಿದ್ಯಾ ಪ್ರಕಾಶನ ಬೆಂಗಳೂರು.
46. ಶಾಂತಿನಾಥ ದಿಬ್ಬದ, 2012, ಆರಾಧನಾ ಕರ್ಣಾಟಟೀಕಾ, ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು.
47. ಶೇಷಗಿರಿ ರಾವ್ ಎಲ್. ಎಸ್. (ಸಂ), 1987, ಶ್ರೀಮತಿ ನಂಜನಗೂಡು ತಿರುಮಲಾಂಬಾ ಜೀವನ ಮತ್ತು ಸಾಹಿತ್ಯ, ಐಬಿಎಚ್ ಪ್ರಕಾಶನ ಬೆಂಗಳೂರು.
48. ಶ್ರೀನಿವಾಸ, 2002, ಚಿಕವೀರ ರಾಜೇಂದ್ರ, ಜೀವನ ಕಾರ್ಯಾಲಯ ಟ್ರಸ್ಟ್ ಬೆಂಗಳೂರು.
49. ಶ್ರೀನಿವಾಸರಾಜು, ಚಿ. (ಸಂ), 1985, ಶ್ರೀಗಂಧ: ಬಿ. ಎಂ. ಶ್ರೀ ಸಂಸ್ಮರಣ ಸಂಚಿಕೆ, ಬಿ. ಎಂ. ಶ್ರೀ ಸ್ಮಾರಕ ಪ್ರತಿಷ್ಠಾನ ಬೆಂಗಳೂರು.
50. ಶ್ರೀನಿವಾಸ ಹಾವನೂರ, 2000, ಹೊಸಗನ್ನಡ ಅರುಣೋದಯ, ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು.
51. ಸಂಗಮೇಶ ಸವದತ್ತಿಮಠ, 1995, ಸಾಹಿತ್ಯ ಸಂಶೋಧನ ಮಾರ್ಗ, ರೂಪರಶ್ಮಿ ಪ್ರಕಾಶನ ಕಲಬುರ್ಗಿ
52. ಸಿದ್ಧರಾಜು ಎಸ್. ಆರ್., 2014, ಮಾದರಿ ಪತ್ರಗಳು, ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು.
53. ಸುರೇಶ ನಾರಾಯಣ ನಾಯ್ಕ, 2016, ಸಂಶೋಧನ ದೀಪ, ಸುವರ್ಣ ಪ್ರಕಾಶನ ಹೊನ್ನಾವರ.
54. ಸೋಮಣ್ಣ ಜೆ. (ಸಂ), 2009, ಒಡನಾಟದ ನೆನಪುಗಳು, ಉನ್ನತಿ ಪ್ರಕಾಶನ ಮೈಸೂರು.
55. ಹರಗಿ ವೈ. ಎಸ್.(ಸಂ), 2012, ಕಲ್ಲರಳಿ ಹೂವಾಗಿ, ಶ್ರೀನಿವಾಸ ಪುಸ್ತಕ ಪ್ರಕಾಶನ ಬೆಂಗಳೂರು.
56. ಹೇಮಾ ಪಟ್ಟಣಶೆಟ್ಟಿ, 1981, ಹೊನ್ನಾಪುರ, ಪುಟ. 249, ಅನನ್ಯ ಪ್ರಕಾಶನ ಧಾರವಾಡ.
57. Angelo, Michel (1965), Complete Poems and Selected Letters, New York: Random House.
58. Chriber, V. N., 1970, Jawaharlal Nehru : a man of Letters, Delhi: Vikas
59. Eden, Emily (1978), Up the Country: Letters written to her Sister from the upper provinces of india, London: Carzon Press.
60. Gandhi, Sonia (2005), Two Alone, Two Together: Letters Between Indira Gandhi and Jawaharlal Nehru 1922-1964, Penguin Books India.

61. Hawthorne, Nathaniel (1950), Scarlet Letter: a Rommance, New York: Random House.
62. Letters of Aurobindo, Pondicherry: Shree Aurobindo Ashram(1961).
63. Life – Literature – Yogo: Some Letters of Sri Aurobindosri, Publisher – Pondicherry: Shree Aurobindo Ashram (1967).
64. Mayavati(Ed), 1970, Letters of Swami Vivekananda, Calcutta: Advaith Ashram.
65. Nehru, Jawaharlal (1929), Letters from a father to His Daughter, Allahabad: Law Journal Press.
66. Paige D D (Ed), (1950), The Selected Letters of EzraPound 1907-1941, London: Faber and Faber. Pascal, Blaise, (1941).
67. Pensees the Provincial Letters, New York: The Modern Library.
68. Promilla, Kalhan (Ed), (1976), Indira Gandhi writes Letter to Young People, New Delhi: Arnold Heinemann.
69. Shariman, Narayan (1968), Letters from Gandhi, Nehru, Vinoba, Bombay: Asia.
70. Tagore, Rabindranath (1961), Glimpses of Bengal: Selected from the Letters of Sir Rabindranath Tagore (1885-1895), London: Macmillan

ಪತ್ರ ಸಾಹಿತ್ಯದ ಕುರಿತು ಇದುವರೆಗೆ ನಡೆದ ಸಂಶೋಧನ ಅಧ್ಯಯನಗಳು

1. ಚಿಲಮಿ ಆರ್. ಬಿ., 2003, ಬ. ಗಿ. ಯಲ್ಲಟ್ಟಿ: ಸಮಗ್ರ ಸಾಹಿತ್ಯ(ಪಿಎಚ್.ಡಿ ಪ್ರಬಂಧ), ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.
2. ಬಸವರಾಜು ಕೆ., 2010, ಕನ್ನಡ ಹಸ್ತಪ್ರತಿಗಳಲ್ಲಿ ಪತ್ರ ಸಾಹಿತ್ಯ (ಎಂ.ಫಿಲ್ ನಿಬಂಧ), ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಬೆಂಗಳೂರು.

ಪುಸ್ತಕ ಲೇಖನಗಳು

1. ಪತ್ರ ಸಾಹಿತ್ಯ: ಕನ್ನಡ ವಿಷಯ ವಿಶ್ವಕೋಶ ಕರ್ನಾಟಕ ಸಂಪುಟ–2, 2007, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
2. ಪತ್ರ ಸಾಹಿತ್ಯ: ಲೇ: ಗುರುಪಾದ ಮರಿಗುದ್ದಿ, ಆಧುನಿಕ ಕನ್ನಡ ಸಾಹಿತ್ಯ ರೂಪಗಳು (1996): ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.

ಪತ್ರಿಕಾ ಲೇಖನಗಳು

1.ಕನ್ನಡ ಪ್ರಭ, ಖುಷಿ ಪುರವಣಿ, 3 ಮೇ, 2015 ಭಾನುವಾರ.
2. ಜಾಗತಿಕ ಅಂಚೆ ಪೆಟ್ಟಿಗೆ 142 ವರ್ಷ– ನಾರಾಯಣ ಯಾಜಿ(ಲೇ), ವಿಜಯವಾಣಿ, 9 ಅಕ್ಟೋಬರ್ 2016, ಪುಟ 10.

3. ಪತ್ರ ಬರೆಹದ ಕಾಲ ಇನ್ನು ಮುಗಿದಿಲ್ಲ– ಲೇ: ಎನ್. ಎಸ್. ಗುಂಡೂರು, ಹೊಸತು– ಸಂ: ಸಿದ್ಧನಗೌಡ ಪಾಟೀಲ, ನವಕರ್ನಾಟಕ ಪ್ರಿಂಟರ್ಸ್ ಬೆಂಗಳೂರು, ಮೇ 2016.
4. ಪತ್ರ ವಾತ್ಸಲ್ಯ– ಅಂಜಲಿ ಅಶ್ವಿನ್, ಉದಯವಾಣಿ ಜುಲೈ, 07, 2019.
5. ಪತ್ರ ಸಂಸ್ಕೃತಿ ತೆರೆದಿಡುವ ಕೃತಿ 'ಪರಸ್ಪರ'– ಪ್ರಜಾವಾಣಿ ಪತ್ರಿಕೆಯ ವಾರ್ತೆ –18 ಮಾರ್ಚ್ 2013.
6. ಪಾರಿವಾಳ ಮತ್ತು ಟ್ವಿಟರ್– ರಹಮತ್ ತರೀಕೆರೆ, ದೀಪಾವಳಿ ವಿಶೇಷಾಂಕ ಪ್ರಜಾವಾಣಿ ಪತ್ರಿಕೆ, 2019.
7. ಪೋಸ್ಟ್‌ಮಾನ್ ಪಾರಿವಾಳ–ಎನ್. ಜಗನ್ನಾಥ ಪ್ರಕಾಶ್, ಉದಯವಾಣಿ ಸಾಪ್ತಾಹಿಕ ಸಂಪದ– 22.04.2018.
8. ಪ್ರಜಾವಾಣಿ, ಮುಕ್ತಛಂದ/ಕವಿರಾಜಮಾರ್ಗ ಪುರವಣಿ, 3 ಮೇ, 2015 ಭಾನುವಾರ.
9. ಹಯವದನ ಪುರಾಣಿಕ ಕೆ., ಒಂದೆಲೆ ನುಂಗಿತು (ಲೇ), ತತ್ವವಾದ(ಪತ್ರಿಕೆ) ಸೆಪ್ಟಂಬರ್ 2004, ಪುಟ. 19.

ಸಾಹಿತಿಗಳ ಅಪ್ರಕಟಿತ ಬಿಡಿ ಪತ್ರಗಳು

1. ಅರವಿಂದ ಮಾಲಗತ್ತಿ
2. ಗಿರಡ್ಡಿ ಗೋವಿಂದರಾಜ
3. ಚೆನ್ನವೀರ ಕಣವಿ
4. ಶ್ರೀಪಾದ ಶೆಟ್ಟಿ
5. ಬಿ. ಎ. ಸನದಿ
6. ಎಲ್. ಎಸ್. ಶೇಷಗಿರಿರಾವ್

ಅಂತರ್ಜಾಲದ ಮಾಹಿತಿ

1. https://en.wikipedia.org/wiki/Epistolary_novel#Twenty-first_century
2. https://en.wikipedia.org/wiki/Pamela;_or,_Virtue_Rewarded
3. https://en.wikipedia.org/wiki/Letter_(message)

ಸಂಶೋಧನಾರ್ಥಿ ಮಾರ್ಗದರ್ಶಕರು ಅಧ್ಯಕ್ಷರು

ಎಸ್.ವಿ.ಪಿ ಕನ್ನಡ ಅಧ್ಯಯನ ಸಂಸ್ಥೆ